6675240

**ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಪತ್ರಿಕೆ

# ಪತ್ರಿಕೆ I

# (277)

ಪ್ರಶ್ನೆ ಪತ್ರಿಕೆ ಶ್ರೇಣಿ

**D**

**ಸಮಯ : $1\frac{1}{2}$ ಗಂಟೆಗಳು** **ಗರಿಷ್ಠ ಅಂಕಗಳು : 200**

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಅಮುದ್ರಿತ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡುಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆ ಪತ್ರಿಕೆ ಯೊಂದಿಗೆ ಬದಲಾಯಿಸಿ ಕೊಳ್ಳತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಯ ಶ್ರೇಣಿಯು, ತಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡುಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮಗೆ ಹೊಂದುವ (ಅದೇ) ಪ್ರಶ್ನೆ ಪತ್ರಿಕೆಯಾದ ಮತ್ತು ಒ.ಎಂ.ಆರ್.ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆ ಪತ್ರಿಕೆಯನ್ನೇ ಪಡೆಯತಕ್ಕದ್ದು.**
3. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| 1 | 2 | 2 | 6 | 6 | 9 | 7 |

4. **ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಅದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.**
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
9. **ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು. ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳಲ್ಲಿ ಯಾವುದೇ ಗೊಂದಲಗಳಿದ್ದರೂ ಆಂಗ್ಲಭಾಷೆಯ ಪ್ರಶ್ನೆಗಳೇ ಅಂತಿಮವಾಗಿರುತ್ತದೆ.**
10. **ತಪ್ಪು ಉತ್ತರಗಳಿಗೆ ವಿಧಿಸಲಾಗುವ ದಂಡ :**

**ವಸ್ತುನಿಷ್ಠ ಬಹು ಆಯ್ಕೆ ಪ್ರಶ್ನೆ ಪತ್ರಿಕೆಗಳಲ್ಲಿ ಅಭ್ಯರ್ಥಿಗಳು ಗುರುತು ಮಾಡಿದ ತಪ್ಪು ಉತ್ತರಕ್ಕೆ ದಂಡ ವಿಧಿಸಲಾಗುತ್ತದೆ.**

(i) ಪ್ರತಿಯೊಂದು ಪ್ರಶ್ನೆಯ ಉತ್ತರಕ್ಕೆ ನಾಲ್ಕು ಪರ್ಯಾಯಗಳಿವೆ. ಅಭ್ಯರ್ಥಿಯು ತಪ್ಪು ಉತ್ತರ ನೀಡಿದ ಪ್ರತಿಯೊಂದು ಪ್ರಶ್ನೆಗೆ ಆ ಪ್ರಶ್ನೆಗೆ ನಿಗದಿಪಡಿಸಲಾದ ಅಂಕಗಳಲ್ಲಿ ¼ ರಷ್ಟು ಅಂಕಗಳನ್ನು ದಂಡ ರೂಪದಲ್ಲಿ ಕಳೆಯಲಾಗುವುದು.

(ii) ಅಭ್ಯರ್ಥಿಯು ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರವನ್ನು ನೀಡಿದರೆ, ಅಲ್ಲಿರುವ ಒಂದು ಉತ್ತರವು ಸರಿಯಿದ್ದರೂ ಸಹ ಅದನ್ನು ತಪ್ಪು ಉತ್ತರ ಎಂದು ಪರಿಗಣಿಸಲಾಗುವುದು ಮತ್ತು ಮೇಲೆ ತಿಳಿಸಿದಂತೆಯೇ ಆ ಪ್ರಶ್ನೆಗೆ ದಂಡ ವಿಧಿಸಲಾಗುವುದು.

(iii) ಅಭ್ಯರ್ಥಿಯು ಪ್ರಶ್ನೆಯನ್ನು ಖಾಲಿ ಬಿಟ್ಟಿದ್ದಾಗ ಅಂದರೆ ಉತ್ತರವನ್ನು ನೀಡದಿದ್ದಾಗ ಆ ಪ್ರಶ್ನೆಗೆ **ಯಾವುದೇ ದಂಡ ವಿಧಿಸಲಾಗುವುದಿಲ್ಲ.**

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note : English version of the instructions is printed on the back cover of this booklet.***



Scanned by CamScanner

1. ಭಾರತದ ಉತ್ತರದಿಂದ ದಕ್ಷಿಣದ ವರೆಗೂ ಹುಲಿ ಕಾಪು ತಾಣಗಳನ್ನು ಕ್ರಮವಾಗಿ ಜೋಡಿಸಿ :

A. ಇಂದ್ರಾವತಿ

B. ದೂಧ್ವಾ

C. ಬಂಡೀಪುರ

D. ಸಿಮ್ಲಿಪಾಲ್

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) C, D, A, B

(2) D, B, C, A

(3) B, D, A, C

(4) B, A, D, C

2. ವಿನಾಶಕಾರಿ ಮೋಡಸಿಡಿತ 2010 ರ ಆಗಸ್ಟನಲ್ಲಿ ಲೇಹ್‌ನಲ್ಲಿ ಉಂಟಾಯಿತು. ಈ ಪೈಕಿ ಯಾವ ಹೇಳಿಕೆ ಮೋಡಸಿಡಿತಕ್ಕೆ ಸಂಬಂಧಿಸಿದಂತೆ ಸರಿಯಲ್ಲ?

(1) ಮೋಡ ಸಿಡಿತವು ಸ್ಥಳೀಯ ಹವಾಮಾನ ವಿದ್ಯಮಾನವಾಗಿದ್ದು, ಮಳೆಯು ಅತ್ಯಲ್ಪ ಕಾಲದಲ್ಲಿ ಕಡಿಮೆ ಪ್ರದೇಶದಲ್ಲಿ ಅಧಿಕವಾಗಿ ಸಾಂದ್ರಿತವಾಗಿ ಬೀಳುವುದನ್ನು ಪ್ರತಿನಿಧಿಸುತ್ತದೆ.

(2) ಮೋಡ ಸಿಡಿತವು ತೇವಾಂಶದ ಮೇಲ್ಮುಖ ಚಲನೆಯಿಂದ ಅತ್ಯಂತ ವೇಗವಾಗಿ ಕ್ಯುಮುಲೋ ನಿಂಬಸ್ ಮೋಡ ಉಂಟಾದಾಗ ಆಗುತ್ತದೆ.

(3) ಮೋಡಸಿಡಿತವು ಬೆಟ್ಟ ಪ್ರದೇಶದಲ್ಲಿ ಮಾತ್ರ ಆಗುತ್ತದೆ.

(4) ಮೋಡಸಿಡಿತ ಮುನ್ಸೂಚನೆಗೆ ಯಾವುದೇ ತೃಪ್ತಿಕರ ತಂತ್ರ ಜ್ಞಾನ ಲಭ್ಯವಿಲ್ಲ

3. ಪಟ್ಟಿ I (ಅಣೆಕಟ್ಟು) ಮತ್ತು ಪಟ್ಟಿ II (ನದಿ) ಯನ್ನು ಹೊಂದಿಸಿ :

| *ಪಟ್ಟಿ I (ಅಣೆಕಟ್ಟು)* | | *ಪಟ್ಟಿ II (ನದಿ)* | |
|---|---|---|---|
| A. | ಉಕಾಯ್ ಅಣೆಕಟ್ಟು | I. | ಬಿಯಾಸ್ |
| B. | ಭಾಕ್ರಾ ಅಣೆಕಟ್ಟು | II. | ಕೃಷ್ಣಾ |
| C. | ನಾಗಾರ್ಜುನ ಸಾಗರ ಅಣೆಕಟ್ಟು | III. | ಸಟ್ಲೆಜ್ |
| D. | ಪ್ಯಾಂಡೋ ಅಣೆಗಟ್ಟು | IV. | ತಪತಿ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | III | II | IV |
| (2) | I | II | III | IV |
| (3) | IV | III | II | I |
| (4) | IV | II | III | I |

4. ಈ ಹೇಳಿಕೆಗಳನ್ನು ಪರಿಗಣಿಸಿ :

A. ಜನನಿ ಸುರಕ್ಷಾ ಯೋಜನೆಯ ಗುರಿಯು ಮಾತೆ ಹಾಗೂ ನವಜಾತ ಶಿಶುವಿನ ಮರಣ ತಪ್ಪಿಸುವುದು.

B. ಜನನಿ ಸುರಕ್ಷಾ ಯೋಜನೆಯು 75% ಕೇಂದ್ರ ಪ್ರಾಯೋಜಿತವಾದ ಯೋಜನೆ.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಇವೆರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ



Scanned by CamScanner

5. ಯಾವ ಬಹಮನಿ ಸುಲ್ತಾನನನ್ನು 'ವಾಲಿ' ಅಥವಾ 'ಸಂತ' ನೆಂದು ಕರೆಯುತ್ತಿದ್ದರು ?

(1) ಫಿರೋಜ್ ಷಾ

(2) ಅಹ್ಮದ ಷಾ II

(3) ಅಲ್ಲಾದ್ದೀನ ಹುಮಾಯೂನ್

(4) ಅಹ್ಮದ್ ಷಾ

6. ಬಸವಣ್ಣನವರಿಗೆ ಸಂಬಂಧಿಸಿದಂತೆ ಈ ಹೇಳಿಕೆಗಳನ್ನು ಪರಿಗಣಿಸಿ :

A. ಇವರು ಅನುಭವ ಮಂಟಪದ ಸ್ಥಾಪಕರು.

B. ಇವರು ಅನುಭವ ಮಂಟಪದಲ್ಲಿ ವೀರಶೈವರಿಗೆ ಮಾತ್ರ ಅವಕಾಶವನ್ನು ನೀಡಿದ್ದರು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಇವೆರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ

7. ರಾಬರ್ಟ್ ಸಿವೆಲ್‌ರು ವಿಜಯನಗರ ಸಾಮ್ರಾಜ್ಯ ಕುರಿತಂತೆ ಪುಸ್ತಕ ಬರೆದರು. ಆ ಪುಸ್ತಕದ ಹೆಸರೇನು ?

(1) *ನೆವರ್ ಟು ಬಿ ಫರ್ಗಾಟನ್ ಎಂಪೈರ್*

(2) *ಕೃಷ್ಣ ದೇವರಾಯ ಅಂಡ್ ಹಿಸ್ ಟೈಮ್ಸ್*

(3) *ಹಂಪಿ ರೂಯಿನ್ಸ್*

(4) *ಎ ಫರ್‌ಗಾಟನ್ ಎಂಪೈರ್ : ವಿಜಯನಗರ್*

8. ಕೆಳದಿಗಳ ರಾಜ ಚಿಹ್ನೆ ಯಾವುದು ?

(1) ಸ್ವಾಮಿ ವೃಷಭ

(2) ಆನೆ

(3) ವರಾಹ

(4) ಗಂಡಭೇರುಂಡ

9. ಪಟ್ಟಿ I (ಕೃತಿ) ಮತ್ತು ಪಟ್ಟಿ II (ಕರ್ತೃಗಳ) ನ್ನು ಹೊಂದಿಸಿ :

| *ಪಟ್ಟಿ I* *(ಕೃತಿ)* | *ಪಟ್ಟಿ II* *(ಕರ್ತೃ)* |
|---|---|
| A. ಕಥಾಸರಿತ್ಸಾಗರ | I. ಜೀಮೂತವಾಹನ |
| B. ದಯಾಭಾಗ | II. ಹೇಮಾದ್ರಿ |
| C. ಕಾವ್ಯಮೀಮಾಂಸಾ | III. ವಿಜ್ಞಾನೇಶ್ವರ |
| D. ಚತುರ್‌ವರ್ಗ ಚಿಂತಾಮಣಿ | IV. ಸೋಮದೇವ |
| | V. ರಾಜಶೇಖರ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | IV | I | V | II |
| (2) | V | I | II | III |
| (3) | II | III | IV | V |
| (4) | V | III | II | I |

10. ಈ ಕೆಳಗಿನ ಸರೋವರಗಳಲ್ಲಿ ಯಾವುದು ಗೋದಾವರಿ ಮತ್ತು ಕೃಷ್ಣ ಪ್ರಸ್ಥಭೂಮಿನಡುವೆ ಇರುವ ಮತ್ತು ಆಳವಿಲ್ಲದ ನೀರಿನ ಕಾಯವಾಗಿದೆ ?

(1) ಪುಲಿಕ್ಯಾಟ್

(2) ಚಿಲಿಕಾ

(3) ಕೊಲ್ಲೆರು

(4) ವೆಂಬನಾಡ್



Scanned by CamScanner

11. ಕರ್ನಾಟಕದ ಕೆಳಗಿನ ನದಿಗಳನ್ನು ಪರಿಗಣಿಸಿ

A. ಬೇಡ್ತಿ

B. ಸೀತಾ

C. ಗುರುಪುರ

D. ನೇತ್ರಾವತಿ

ಕರ್ನಾಟಕದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳ ದೃಷ್ಟಿಯಿಂದ ಉತ್ತರದಿಂದ ದಕ್ಷಿಣಕ್ಕೆ ಹರಿಯುವ ನದಿಗಳ ಸರಿಯಾದ ಕ್ರಮಾನುಗತಿ ಯಾವುದು ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :


(1) A, B, C, D

(2) C, A, B, D

(3) D, B, A, C

(4) C, D, B, A

12. ದಾಳವನ್ನು ಮೂರುಬಾರಿ ಎಸೆಯಲಾಗಿದ್ದು ಮತ್ತು ಅದರ ಮೂರು ವಿಭಿನ್ನ ಸಾಧ್ಯತೆಗಳನ್ನು ಕೆಳಗೆ ನೀಡಿದೆ. 3 ನ್ನು ತೋರಿಸುವ ಮುಖದ ವಿರುದ್ಧ ಇರುವ ಮುಖದಲ್ಲಿನ ಸಂಖ್ಯೆಯನ್ನು ಕಂಡುಹಿಡಿಯಿರಿ.





(1) 1

(2) 4

(3) 5

(4) 6

13. ಈ ಚಿತ್ರದಲ್ಲಿರುವ ಚೌಕಗಳೆಷ್ಟು ?



(1) 13

(2) 15

(3) 16

(4) 17

14. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

*ಹೇಳಿಕೆ (ಎ) :*

ಕಬ್ಬಿಣದ ಹಡಗು ಮತ್ತು ಮರದ ದೋಣಿ ನೀರಿನಲ್ಲಿ ತೇಲುವು ದಾದರೂ ಕಬ್ಬಿಣದ ಮೊಳೆ ಮುಳುಗುವುದು.

*ಕಾರಣ (ಆರ್) :*

ಹಡಗು ಮತ್ತು ದೋಣಿಗಳ ವಿಶೇಷವಾದ ವಿನ್ಯಾಸ ಮತ್ತು ಆಕಾರಗಳು ಖಾತ್ರಿ ಪಡಿಸುವುದೆಂದರೆ ಪಲ್ಲಟನವಾದ ನೀರಿನ ಭಾರವು ಹಡಗು ಮತ್ತು ದೋಣಿಯ ಭಾರಕ್ಕಿಂತಲೂ ಅಧಿಕ ವಾಗಿದೆ.

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) ಎ ಮತ್ತು ಆರ್ ಎರಡೂ ಸರಿ ಮತ್ತು ಆರ್‌ವು ಎ ಯ ಸರಿಯಾದ ವಿವರಣೆ

(2) ಎ ಮತ್ತು ಆರ್ ಎರಡೂ ಸರಿ ಆದರೆ ಆರ್‌ವು ಎ ಯ ಸರಿಯಾದ ವಿವರಣೆ ಅಲ್ಲ

(3) ಎ ಸರಿ ಆದರೆ ಆರ್ ತಪ್ಪು


(4) ಎ ತಪ್ಪು ಆದರೆ ಆರ್ ಸರಿ



Scanned by CamScanner

**15.** ಈ ಪ್ರಶ್ನೆಯಲ್ಲಿ ಎರಡು ಜೋಡಿ ಚಿತ್ರಗಳ ಗಣಗಳಿವೆ A ಮತ್ತು B ಗಳ ನಡುವೆ ನಿರ್ದಿಷ್ಟವಾದ ಒಂದು ಸಂಬಂಧ ಇದೆ. C ಮತ್ತು D ಗೂ ಅದೇ ರೀತಿಯ ಸಂಬಂಧ ಇರುವಂತೆ ಕೆಳಗೆ ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಚಿತ್ರ ಹುಡುಕಿ

ಪ್ರಶ್ನೆ ಚಿತ್ರಗಳು :




A B C D

ಉತ್ತರ ಚಿತ್ರಗಳು :

(1) 

(2) 

(3) 

(4) 

**16.** ಸುನಾಮಿ ಅಪರೂಪದ ವಿದ್ಯಮಾನ ಆದರೂ ಅತ್ಯಂತ ಮಾರಣಾಂತಿಕವಾದದ್ದು. ಸುನಾಮಿ ಕುರಿತಂತೆ ಜನಜಾಗೃತಿಯನ್ನು ಜಗತ್ತಿನ ಜನರಿಗೆ ಮೂಡಿಸಲು ವಿಶ್ವ ಸಂಸ್ಥೆಯ ಸಾಮಾನ್ಯಸಭೆಯು ವಿಶ್ವ ಸುನಾಮಿ ಜಾಗೃತಿ ದಿನವೆಂದು ಯಾವ ದಿನವನ್ನು ಘೋಷಿಸಿದೆ ?

(1) ನವೆಂಬರ್, 5
(2) ಅಕ್ಟೋಬರ್, 25
(3) ಡಿಸೆಂಬರ್, 15
(4) ಡಿಸೆಂಬರ್, 21

**17.** ಸುನಿಲ್ ಪೂರ್ವದ ದಿಕ್ಕಿಗೆ ನೇರವಾಗಿ ಸಾಗತೊಡಗಿ 100 ಮೀಟರ ಸಾಗಿದ ಮೇಲೆ ಎಡಕ್ಕೆ ತಿರುಗಿ 25 ಮೀ ನೇರವಾಗಿ ಚಲಿಸುತ್ತಾನೆ, ಮತ್ತೆ ಎಡಕ್ಕೆ ತಿರುಗಿ 60 ಮೀ ನೇರವಾಗಿ ಸಾಗುತ್ತಾನೆ, ಮತ್ತೆ ಅವನು ತನ್ನ ಎಡಕ್ಕೆ ತಿರುಗುತ್ತಾನೆ ಮತ್ತು 25 ಮೀ ದೂರವನ್ನು ನಡೆಯುತ್ತಾನೆ. ಈಗ ಅವನು ತನ್ನ ಮೂಲ ಸ್ಥಾನದಿಂದ ಎಷ್ಟು ದೂರದಲ್ಲಿದ್ದಾನೆ ?

(1) 40 ಮೀಟರ್‌ಗಳು
(2) 35 ಮೀಟರ್‌ಗಳು
(3) 15 ಮೀಟರ್‌ಗಳು
(4) 50 ಮೀಟರ್‌ಗಳು

**18.** ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿರುವ ಭಾರತೀಯ ಸಂವಿಧಾನದ ವಿಧಿ ಯಾವುದು ?

(1) 370
(2) 356
(3) 366
(4) 380

**19.** ಜಾತ್ಯಾತೀತತೆಯಲ್ಲಿನ ಆತನ ನಂಬಿಕೆಯ ಕಾರಣದಿಂದ ಕೆಳಗಿನವರಲ್ಲಿ ಯಾವ ಮುಸ್ಲಿಮ್ ದೊರೆಯು 'ಜಗದ್ಗುರು' ಎಂದು ಮುಸ್ಲಿಮ್ ಪ್ರಜೆಗಳಿಂದ ಸಂಬೋಧಿಸಲ್ಪಟ್ಟ ?

(1) ಹುಸೇನ್ ಷಾ
(2) ಜೈನ್–ಉಲ್–ಅಬಿದಿನ್
(3) ಇಬ್ರಾಹಿಮ್ ಆದಿಲ್ ಷಾ II
(4) ಮಹಮುದ್ II



Scanned by CamScanner

20. ಕೇಂದ್ರ ಸರ್ಕಾರವು ಭಾರತದ ಸರ್ವೋಚ್ಚ ನ್ಯಾಯಾಲಯಕ್ಕೆ ಇತ್ತೀಚೆಗೆ ಮಾಹಿತಿ ನೀಡಿ, ಭಾರತದಲ್ಲಿನ ಪ್ರಮುಖ ಡೇಟಾಗಳ ರಕ್ಷಣೆಗೆ ಸಂಬಂಧಿಸಿದ ವಿವಾದಾಂಶಗಳು ಮತ್ತು ಅದಕ್ಕೆ ಸಂಬಂಧಿಸಿದ ಶಿಫಾರಸುಗಳನ್ನು ಕೈಗೊಳ್ಳಲು ಪರಿಣತ ಸಮಿತಿ ರಚಿಸುವುದಾಗಿ ಆ ಸಮಿತಿ ವರದಿ ಆಧಾರದ ಮೇಲೆ ಡೇಟಾಗಳ ರಕ್ಷಣೆಯ ನಿಯಂತ್ರಣ ನಿಯಮಗಳನ್ನು ಜಾರಿಗೊಳಿಸುವ ಸಾಧ್ಯತೆ ಇದೆಯೆಂದು ತಿಳಿಸಿತು. ರಚಿಸಲಾಗಿದ್ದ ಆ ಸಮಿತಿಯ ಅಧ್ಯಕ್ಷರು ಯಾರು ?

(1) ಬಿ.ಎನ್. ಶ್ರೀಕೃಷ್ಣ

(2) ಶ್ರೀನಿವಾಸ ರಾಜು

(3) ಎಚ್.ಆರ್. ಖಾನ್

(4) ಹರೀಶ್ ಸಾಳ್ವೆ

21. ರಷ್ಯಾದ ವಹಿವಾಟು ನಾಯಕರು ಮತ್ತು ಹಿರಿಯ ಸರ್ಕಾರಿ ಪ್ರತಿನಿಧಿಗಳು, ಪೆಸಿಫಿಕ್ ಪ್ರದೇಶ ಹಾಗೂ ಆಗ್ನೇಯ ಏಷ್ಯನ್ ರಾಷ್ಟ್ರಗಳ ಅಸೋಸಿಯೇಷನ್ ನಡುವೆ ಸಹಕಾರಕ್ಕಾಗಿ ಅತ್ಯಂತ ದೊಡ್ಡ ಅಂತರರಾಷ್ಟ್ರೀಯ ಸಂವಹನಾ ವೇದಿಕೆ ಎಂದು ಪರಿಗಣಿಸಲಾದ ಈಸ್ಟರ್ನ್ ಎಕನಾಮಿಕ್ ಫೋರಂ (EEF) 2017 ನ್ನು ಇತ್ತೀಚೆಗೆ ಯಾವ ದೇಶವು ಚಾಲ್ತಿಗೆ ತಂದಿತು ?

(1) ರಷ್ಯಾ

(2) ಮೈನ್‌ಮಾರ್

(3) ಫ್ರಾನ್ಸ್

(4) ಜರ್ಮನಿ

22. ಈ ಹೇಳಿಕೆಗಳನ್ನು ಪರಿಗಣಿಸಿ :

A. ಬಿ.ಸಿ.ಸಿ.ಐ.ವು, ಮಾಜಿ ಭಾರತೀಯ ಕ್ರಿಕೆಟ್ ಕ್ಯಾಪ್ಟನ್ ಮಹೇಂದ್ರ ಸಿಂಗ್ ಧೋನಿ ಯವರನ್ನು ಪದ್ಮಭೂಷಣ ಪ್ರಶಸ್ತಿಗೆ ಇತ್ತೀಚೆಗೆ ನಾಮ ನಿರ್ದೇಶಿಸಿದೆ.

B. ರಾಹುಲ್ ದ್ರಾವಿಡ್ ಕೂಡಾ ಪದ್ಮ ಭೂಷಣ ಪ್ರಶಸ್ತಿ ವಿಜೇತರಾಗಿದ್ದಾರೆ.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಇವೆರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ

23. ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಪ್ರತಿವರ್ಷ ಸೆಪ್ಟೆಂಬರ್ 15 ರಂದು ಆಚರಿಸಿ ಪ್ರಪಂಚದಲ್ಲಿ ಪ್ರಜಾ ಪ್ರಭುತ್ವದ ಸ್ಥಿತಿಯ ಮರು ಪರಿಶೀಲನೆಗೆ ಅವಕಾಶವನ್ನು ಒದಗಿಸಲಾಗಿದೆ. ಈ ವರ್ಷದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಆಶಯ ವಿಷಯ ಏನು ?

(1) ಪ್ರಜಾಪ್ರಭುತ್ವ ಮತ್ತು ಸಂಘರ್ಷ ತಪ್ಪಿಸುವಿಕೆ

(2) ಜನರಿಗೆ ಮಾತ್ರ

(3) ಪ್ರಜಾಪ್ರಭುತ್ವ ಮತ್ತು ನಾಗರಿಕ ಸಮಾಜ

(4) ಪ್ರಜಾ ಪ್ರಭುತ್ವ ಏಕೈಕ ಪರಿಹಾರ



Scanned by CamScanner

**24.** ಕನ್ನಡ ಹಾಗೂ ಸಂಸ್ಕೃತ ಎರಡರ ಮೇಲೂ ಹಿಡಿತವನ್ನು ಹೊಂದಿರುವ ಕಾರಣದಿಂದ ಕನ್ನಡದ ಸಾಹಿತಿಗಳ ಪೈಕಿ "ಉಭಯ ಕವಿ ಚಕ್ರವರ್ತಿ" ಎಂಬ ಬಿರುದನ್ನು ಪಡೆದವರು ಕೆಳಗಿನವರಲ್ಲಿ ಯಾರು ?

(1) ಆದಿಕವಿ ಪಂಪ

(2) ಶ್ರೀ ಪೊನ್ನ

(3) ರನ್ನ

(4) ನಾಗಚಂದ್ರ

**25.** ಕೇಂದ್ರ ಸರ್ಕಾರದ ಈಶಾನ್ಯ ಪ್ರದೇಶ ಅಭಿವೃದ್ಧಿ ಸಚಿವಾಲಯವು ಈಶಾನ್ಯ ಭಾರತದ ಕಲೆ, ಸಂಸ್ಕೃತಿ, ಪರಂಪರೆ, ಊಟ, ಕರಕುಶಲತೆ, ವಹಿವಾಟು, ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಏರ್ಪಡಿಸಿದ ಕಾರ್ಯಕ್ರಮ ಈ ಕೆಳಗಿನವುಗಳಲ್ಲಿ ಯಾವುದು ?

(1) ನಾರ್ತ್–ಈಸ್ಟ್ ಕಾಲಿಂಗ್ (ವಾಯುವ್ಯ ಕರೆ)

(2) ಮ್ಯಾಜಿಕ್ ಆಫ್ ನಾರ್ತ್–ಈಸ್ಟ್ (ಉತ್ತರದ ಜಾದೂ) – ಪೂರ್ವ

(3) ಚಲೋ ಚಲೇ ನಾರ್ತ್–ಈಸ್ಟ್ (ಉತ್ತರದೆಡೆಗೆ ನಡೆ) – ಪೂರ್ವ

(4) ಸೆವೆನ್ ಸಿಸ್ಟರ್ಸ್ ಕಾಲಿಂಗ್ (ಏಳು ಸೋದರಿಯರ ಕರೆ)

**26.** ಈ ಕೆಳಗಿನ ಯಾವ ರಾಜ್ಯದ ಮುಖ್ಯ ಮಂತ್ರಿಯವರು ನರ್ಮದಾ ನದಿಯ ಮೇಲೆ ಸರ್ದಾರ್ ಸರೋವರ ಅಣೆಕಟ್ಟಿನ ಮುಕ್ತಾಯದ ಅಂಗವಾದ ಎರಡು ವಾರಗಳ ದೀರ್ಘ ಆಚರಣೆಯ "ನರ್ಮದಾ ಮಹೋತ್ಸವ ಯಾತ್ರಾ" ದ ಧ್ವಜವನ್ನು ಹಾರಿಸಿದರು ?

(1) ಗುಜರಾತ್

(2) ಮಹಾರಾಷ್ಟ್ರ

(3) ಮಧ್ಯ ಪ್ರದೇಶ್

(4) ಆಂಧ್ರ ಪ್ರದೇಶ್

**27.** ಪ್ರಧಾನ ಮಂತ್ರಿ ಕಿಸಾನ್ ಸಂಪದ ಯೋಜನೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಪಿ.ಎಮ್.ಕೆ.ಎಸ್.ವೈ. ಎನ್ನುವುದು ಮೊದಲಿನ ಕೇಂದ್ರ ವಲಯ ಯೋಜನೆ ಸಂಪದದ ಹೊಸ ಹೆಸರು.

B. 6,000 ಕೋಟಿ ರೂ. ಗಳ ಹಂಚಿಕೆಯೊಂದಿಗೆ ಇದಕ್ಕೆ ಅನುಮೋದನೆ ನೀಡಲಾಯಿತು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಇವೆರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ

**28.** ಕರ್ನಾಟಕದ ಸರಕಿನ ಭೌಗೋಳಿಕತೆಯ ಸೂಚನೆ ಕುರಿತಂತೆ ಕೆಳಗಿನವುಗಳನ್ನು ಪರಿಗಣಿಸಿ :

A. ಮೈಸೂರು ರೇಷ್ಮೆ

B. ಮೈಸೂರು ಶ್ರೀಗಂಧದ ಸಾಬೂನು

C. ಮೈಸೂರು ಮಲ್ಲಿಗೆ

D. ಮೈಸೂರು ಪಾಕ್

ಮೇಲಿನ ಯಾವ ಉತ್ಪನ್ನಗಳು ಕರ್ನಾಟಕದ ಭೌಗೋಳಿಕ ಸೂಚನೆಯನ್ನು ಹೊಂದಿವೆ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಮಾತ್ರ

(2) A ಮತ್ತು C ಮಾತ್ರ

(3) A, B ಮತ್ತು D ಮಾತ್ರ

(4) A, B, C ಮತ್ತು D



Scanned by CamScanner

29. ಥಾಮಸ್ ಬಾಚ್, ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧ್ಯಕ್ಷರು 2024 ಮತ್ತು 2028 ರ ಬೇಸಿಗೆ ಒಲಿಂಪಿಕ್ಸ್‌ನ ಆತಿಥೇಯ ನಗರಗಳನ್ನು ಪ್ರಕಟಿಸಿದ್ದಾರೆ, ಈ ಪ್ರಕಟನೆಯನ್ನು ಕುರಿತಂತೆ ಸರಿಯಾದ ಹೇಳಿಕೆಗಳು ಯಾವುದು / ವು ?

A. 2024 ರ ಬೇಸಿಗೆ ಒಲಿಂಪಿಕ್ಸ್ ನ ಆತಿಥೇಯ ನಗರ ಪ್ಯಾರಿಸ್

B. 2028 ರ ಬೇಸಿಗೆ ಒಲಿಂಪಿಕ್ಸ್‌ನ ಆತಿಥೇಯ ನಗರ ಲಾಸ್ ಏಂಜಲೀಸ್.

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಇವೆರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ

30. ಇತ್ತೀಚಿನ ರೋಹಿಂಗ್ಯಾ ಸಮಸ್ಯೆಯ ಪ್ರಕ್ಷುಬ್ಧತೆಯಲ್ಲಿ ಮೈನ್‌ಮಾರ್‌ನಿಂದ ಬಾಂಗ್ಲಾ ದೇಶಕ್ಕೆ ರೋಹಿಂಗ್ಯಾ ನಿರಾಶ್ರಿತರು ಅಧಿಕ ಪ್ರಮಾಣದಲ್ಲಿ ವಲಸೆ ಬಂದುದರಿಂದ ಆ ದೇಶವು ಎದುರಿಸುತ್ತಿರುವ ಸಮಸ್ಯೆಗೆ ಮಾನವೀಯತಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಬಾಂಗ್ಲಾ ದೇಶಕ್ಕೆ ನೆರವು ನೀಡಲು ಭಾರತವು ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದು ಈ ಕಾರ್ಯಾಚರಣೆಯ ಹೆಸರೇನು ?

(1) ಮಾನವತಾ ಕಾರ್ಯಾಚರಣೆ

(2) ಇನ್ಸಾನಿಯತ್ ಕಾರ್ಯಾಚರಣೆ

(3) ರೋಹಿಂಗ್ಯಾ ಕಾರ್ಯಾಚರಣೆ

(4) ನಿರಾಶ್ರಿತ ಕಾರ್ಯಾಚರಣೆ

31. ಬಿ.ಡಬ್ಲ್ಯು.ಎಫ್. ವಿಶ್ವ ಹಿರಿಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಇತ್ತೀಚೆಗೆ ಯಾವ ರಾಜ್ಯದಲ್ಲಿ ನಡೆಯಿತು ?

(1) ಕೇರಳ

(2) ಕರ್ನಾಟಕ

(3) ಮಹಾರಾಷ್ಟ್ರ

(4) ಆಂಧ್ರ ಪ್ರದೇಶ್

32. ಜಂಟಿ ಉಭಯ ಪಕ್ಷೀಯ ವಾಯು ಬಲ ಕಸರತ್ತು ಷಾಹೀನ್ VI ವು ಯಾವ ಎರಡು ದೇಶಗಳ ನಡುವೆ ಇತ್ತೀಚೆಗೆ ನಡೆಯಿತು ?

(1) ಪಾಕಿಸ್ತಾನ್ ಮತ್ತು ಚೀನಾ

(2) ಪಾಕಿಸ್ತಾನ್ ಮತ್ತು ಯು.ಎ.ಇ. (ಯುನೈಟೆಡ್ ಅರಬ್ ಎಮಿರೇಟ್ಸ್)

(3) ಇರಾನ್ ಮತ್ತು ಚೀನಾ

(4) ಪಾಕಿಸ್ತಾನ್ ಮತ್ತು ಇರಾನ್

33. ಸೆಪ್ಟೆಂಬರ್ 2017 ರಲ್ಲಿ ಮಾಜಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್‌ರು ಬಿಡುಗಡೆ ಮಾಡಿದ ಕೃತಿಗಳಾದ "ಹೌ ಇಂಡಿಯಾ ಸೀಸ್ ದಿ ವರ್ಲ್ಡ್ : ಕೌಟಿಲ್ಯ ಟು ದಿ ಟ್ವೆಂಟಿ ಫರ್ಸ್ಟ್ ಸೆಂಚುರಿ" ಕೃತಿಯನ್ನು ರಚಿಸಿದವರು ಯಾರು ?

(1) ಕೇಂದ್ರ ಸಚಿವ ರವಿಶಂಕರ ಪ್ರಸಾದ

(2) ಮಾಜಿ ವಿದೇಶಾಂಗ ಕಾರ್ಯದರ್ಶಿ ಶ್ಯಾಮ ಶರಣ

(3) ಶಿವಶಂಕರ ಮೆನನ್

(4) ನಿರ್ಮಲಾ ಸೀತಾರಾಮನ್



Scanned by CamScanner

34. ಭಾರತೀಯ-ಅಮೆರಿಕನ್ ಉದ್ಯಮಶೀಲ, ಲೋಕೋಪಕಾರಿ ಮತ್ತು ಸಾಹಸೋದ್ಯಮ ಬಂಡವಾಳಗಾರ ಗುರುರಾಜ್ ದೇಶಪಾಂಡೆಯವರು ಭಾರತದ ಅತಿದೊಡ್ಡ ಸ್ಟಾರ್ಟ್‌ಅಪ್ ಇಂಕ್ಯುಬೇಷನ್ ಕೇಂದ್ರವನ್ನು ಕರ್ನಾಟಕದ ಕೆಳಗಿನ ಯಾವ ನಗರದಲ್ಲಿ ಸ್ಥಾಪಿಸಲು ನಿರ್ಧರಿಸಿದ್ದಾರೆ ?


(1) ಉಡುಪಿ

(2) ಹುಬ್ಬಳ್ಳಿ

(3) ಬೆಳಗಾಂ

(4) ಧಾರವಾಡ್

35. ಕೆಳಗಿನ ಚಿತ್ರವನ್ನು ನೋಡಿ :



ಒಬ್ಬ ವ್ಯಕ್ತಿಯು ಎಡ ಮೇಲ್ಭಾಗದ ಮೂಲೆಯಿಂದ ಹೊರಟು ಬಲ ತಳದ ಮೂಲೆಯವರೆಗೆ ಸದಾ ಬಲಕ್ಕೆ ಚಲಿಸುತ್ತಲೇ ಅಥವಾ ಸಾಲಿನಲ್ಲಿ ಕೆಳಮುಖವಾಗಿ ಸಾಗುತ್ತಾನೆ. ಅವನು ಎಷ್ಟು ಬಗೆಯ ಪಥಗಳಲ್ಲಿ ಸಾಗಬಹುದು ?

(1) 4

(2) 5

(3) 6

(4) 7

36. ಕೆಳಗಿನ ಪ್ರಶ್ನೆಯಲ್ಲಿ ನಾಲ್ಕು ಹೇಳಿಕೆಗಳನ್ನು ನೀಡಲಾಗಿದ್ದು ಇವುಗಳನ್ನು ಹೊಂದಿಕೊಂಡಂತೆ ಮೂರು ತೀರ್ಮಾನಗಳಿವೆ. ಅವು ತಿಳಿದಿರುವ ಸಂಗತಿಗಳೊಂದಿಗೆ ಅನುರೂಪವಾಗಿರದಿದ್ದರೂ, ಹೇಳಿಕೆಗಳನ್ನು ನೀವು ಸತ್ಯ ಎಂತಲೇ ಪರಿಗಣಿಸಬೇಕಾಗುತ್ತದೆ. ನೀಡಿರುವ ಹೇಳಿಕೆಗಳಿಗೆ ತಾರ್ಕಿಕವಾಗಿ ಅವುಗಳನ್ನು ಅನುಸರಿಸುವ ತೀರ್ಮಾನಗಳ ಯಾವುವು ?

ಹೇಳಿಕೆಗಳು :

I. ಎಲ್ಲ ಗೋಡೆಗಳೂ ಮನೆಗಳು.

II. ಎಲ್ಲ ಮನೆಗಳೂ ಬಣ್ಣಗಳು.

III. ಕೆಲವು ಬಣ್ಣಗಳು ಬಂಗಲೆಗಳು.

IV. ಯಾವ ಬಂಗಲೆಯೂ ಸ್ತಂಭವಲ್ಲ.

ತೀರ್ಮಾನಗಳು :

A. ಕೆಲವು ಮನೆಗಳು ಬಂಗಲೆಗಳಾಗುವುದು ಒಂದು ಸಾಧ್ಯತೆ ಮಾತ್ರ.

B. ಕೆಲವು ಬಣ್ಣಗಳು ಗೋಡೆಗಳು.

C. ಕೆಲವು ಬಣ್ಣಗಳು ಸ್ತಂಭಗಳಲ್ಲ.

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) A ಮತ್ತು B ಮಾತ್ರ


(3) B ಮಾತ್ರ


(4) A, B ಮತ್ತು C




Scanned by CamScanner

37. ಈ ವೆನ್ ನಕಾಶೆಗಳ ಪೈಕಿ ಬಸ್, ಕಾರು ಮತ್ತು ಬ್ರೇಕ್‌ಗಳ ಸಂಬಂಧವನ್ನು ಸರಿಯಾಗಿ ಪ್ರತಿನಿಧಿಸುವುದು ಯಾವುದು ?

(1) 

(2) 

(3) 

(4) 

38. 106 ಮೀನುಗಳನ್ನು ಮೀನು ತೊಟ್ಟಿಗಳಲ್ಲಿ ವಿತರಣೆ ಮಾಡಬೇಕಾಗಿದೆ. ಯಾವುದೇ ಎರಡು ತೊಟ್ಟಿಗಳಲ್ಲಿ ಸಮಾನ ಸಂಖ್ಯೆಯ ಮೀನುಗಳು ಇರದಂತೆ ನೋಡಿಕೊಳ್ಳಬೇಕಾಗಿದೆ. ಗರಿಷ್ಠ ಎಲ್ಲ ಮೀನುಗಳೂ ಇದೇ ರೀತಿಯಲ್ಲಿ ಇರುವಂತೆ ಜೋಡಿಸಲು ಎಷ್ಟು ಸಂಖ್ಯೆಯ ತೊಟ್ಟಿಗಳ ಸಂಖ್ಯೆಯನ್ನು ಬಳಸಬೇಕಾಗಿದೆ ?


(1) 105

(2) 14

(3) 1

(4) 17

39. ಕೆಳಗಿನದರಲ್ಲಿ 'X' ಬೆಲೆಯನ್ನು ಕಂಡು ಹಿಡಿಯಿರಿ :




(1) X = 325

(2) X = 383

(3) X = 275

(4) X = 293

40. ಭಾರತದ ಸಂವಿಧಾನದ ಯಾವ ಕಲಮು, ಪ್ರತಿ ರಾಜ್ಯವೂ ಮಾತೃ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಬೋಧಿಸಲು ಸಾಕಷ್ಟು ಸೌಲಭ್ಯವನ್ನು ಒದಗಿಸಲು ರಾಜ್ಯಗಳು ಪ್ರಯತ್ನಿಸಬೇಕೆಂದು ತಿಳಿಸುತ್ತದೆ ?

(1) ಕಲಮು 349

(2) ಕಲಮು 350

(3) ಕಲಮು 350A

(4) ಕಲಮು 351

41. ಒಂದು ಕಾನೂನಿನ ವಿಷಯ ಅಥವಾ ಘಟನೆಯ ಬಗ್ಗೆ ರಾಷ್ಟ್ರಪತಿಗೆ ಭಾರತದ ಸರ್ವೋಚ್ಚ ನ್ಯಾಯಾಲಯವು ಸಲಹೆಯನ್ನು ನೀಡುವುದು

(1) ತನ್ನ ಸ್ವಂತ ಉಪಕ್ರಮದಲ್ಲಿ.

(2) ಅತ ಸಲಹೆಯನ್ನು ಬಯಸಿದಲ್ಲಿ ಮಾತ್ರ.

(3) ಈ ವಿಷಯವು ನಾಗರಿಕರ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ್ದರೆ ಮಾತ್ರ.

(4) ಈ ಸಮಸ್ಯೆಯು, ದೇಶದ ಏಕತೆ ಮತ್ತು ಸಮಗ್ರತೆಗೆ ಸವಾಲು ಒಡ್ಡುತ್ತಿದ್ದರೆ ಮಾತ್ರ.



Scanned by CamScanner

42. ಪಟ್ಟಿ I (ಸಂವಿಧಾನ ಕಲಮು) ಮತ್ತು ಪಟ್ಟಿ II (ವಿಷಯ) ಗಳನ್ನು ಹೊಂದಿಸಿ :


| ಪಟ್ಟಿ I (ಸಂವಿಧಾನ ಕಲಮು) | | ಪಟ್ಟಿ II (ವಿಷಯ) | |
|---|---|---|---|
| A. | ಕಲಮು 54 | I. | ಭಾರತದ ರಾಷ್ಟ್ರಪತಿಗಳ ಚುನಾವಣೆ |
| B. | ಕಲಮು 75 | II. | ಪ್ರಧಾನ ಮಂತ್ರಿ ಮತ್ತು ಮಂತ್ರಿಗಳ ಮಂಡಲದ ನೇಮಕ |
| C. | ಕಲಮು 155 | III. | ಒಂದು ರಾಜ್ಯದ ರಾಜ್ಯಪಾಲರ ನೇಮಕ |
| D. | ಕಲಮು 154 | IV. | ಮುಖ್ಯ ಮಂತ್ರಿ ಮತ್ತು ರಾಜ್ಯದ ಮಂತ್ರಿಗಳ ಮಂಡಲದ ನೇಮಕ |
| | | V. | ವಿಧಾನ ಸಭೆಗಳ ಸಂಯೋಜನೆ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | I | II | IV | V |
| (3) | II | I | III | V |
| (4) | II | I | IV | III |

43. ಈ ಕೆಳಗಿನ ಪೈ ಚಿತ್ರಪಟವು ವಿವಿಧ ಬೆಳೆಗಳಡಿ ಜಮೀನು ವಿತರಣೆ ಕುರಿತಂತೆ ಇದೆ. ಇದನ್ನು ಎಚ್ಚರದಿಂದ ಅಧ್ಯಯನ ಮಾಡಿ ಪ್ರಶ್ನೆಗೆ ಉತ್ತರಿಸಿ :

**ವಿವಿಧ ಆಹಾರ ಬೆಳೆಗಳಡಿ ಜಮೀನು ವಿತರಣೆ (ಎಕರೆಗಳಲ್ಲಿ)**




ಯಾವ ಮೂರು ಬೆಳೆಗಳ ಸಂಯೋಜನೆಯು ಈ ಬೆಳೆಗಳಡಿ ಒಟ್ಟು ಪ್ರದೇಶದ 50% ರಷ್ಟನ್ನು ಒಳಗೊಳ್ಳುತ್ತದೆ ?

(1) ಗೋಧಿ, ಬಾರ್ಲಿ ಮತ್ತು ಜೋಳ

(2) ಅಕ್ಕಿ, ಗೋಧಿ ಮತ್ತು ಜೋಳ

(3) ಅಕ್ಕಿ, ಗೋಧಿ ಮತ್ತು ಬಾರ್ಲಿ

(4) ಬಾಜ್ರ, ಮೆಕ್ಕೆ ಜೋಳ ಮತ್ತು ಅಕ್ಕಿ

44. ಬಳ್ಳಾರಿಯಲ್ಲಿ ಪ್ರಥಮ ಬಾರಿಗೆ ಕನ್ನಡ ಮುದ್ರಣಾಲಯವನ್ನು ಯಾರು ಸ್ಥಾಪಿಸಿದರು ?

(1) ರೆವರೆಂಡ್ ಜಾನ್ ಹ್ಯಾಂಡ್ಸ್

(2) ರಾಬರ್ಟ್ ಸೀವೆಲ್

(3) ಕರ್ನಲ್ ಮಾರ್ಕ್ ವಿಲ್ಕ್ಸ್

(4) ಫರ್ಡಿನೆಂಡ್ ಕಿಟ್ಟೆಲ್



Scanned by CamScanner

45. ಈ ಹೇಳಿಕೆಯನ್ನು ಓದಿ ಸರಿಯುತ್ತರ ಹುಡುಕಿ :

ಅನುಷಾ ಭಾರ್ಗವಿಗಿಂತ ಹಿರಿಯಳು ಚಂದ್ರಿಕಾ ಅನುಷಾಗಿಂತ ಹಿರಿಯಳು ಆದರೆ ದಿವ್ಯಾಗಿಂತ ಕಿರಿಯಳು. ದಿವ್ಯಾ ಭಾರ್ಗವಿಗಿಂತ ಹಿರಿಯಳು ಭಾರ್ಗವಿಯು ಚಂದ್ರಿಕಾಗಿಂತ ಕಿರಿಯಳು. ಈರಮ್ಮ ಎಲ್ಲರಿಗಿಂತ ಹಿರಿಯಳು.

ವಯೋಮಾನ ರೀತ್ಯಾ ಮಧ್ಯದಲ್ಲಿರುವವರು ಯಾರು ?

(1) ದಿವ್ಯಾ
(2) ಅನುಷಾ
(3) ಚಂದ್ರಿಕಾ
(4) ಭಾರ್ಗವಿ

46. ಲೀನಾ, ರೀನಾ ಮತ್ತು ಟೀನಾ, ಮೂರು ಮಹಿಳೆಯರು ಆಂಡ್ರ್ಯೂ, ಬಿಲ್ ಮತ್ತು ಚಾಂಡ್ಲರ್ ಅನ್ನು ಮದುವೆ ಆಗಿದ್ದಾರೆ. ಲೀನಾ ಆಂಡ್ರ್ಯೂನನ್ನು ಮದುವೆಯಾಗಿದ್ದಾಳೆ. ರೀನಾ ಇಂಜಿನಿಯರ್‌ಅನ್ನು ಮದುವೆಯಾಗಿಲ್ಲ ಟೀನಾಳು ವೈದ್ಯನನ್ನು ಮದುವೆಯಾಗಿಲ್ಲ ಚಾಂಡ್ಲರ್ ಒಬ್ಬ ವೈದ್ಯನಲ್ಲ ಮತ್ತು ಆಂಡ್ರ್ಯೂ ಒಬ್ಬ ವಕೀಲನು.

ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆ ಸರಿ ?

(1) ರೀನಾ ಚಾಂಡ್ಲರ್ ಎಂಬ ಇಂಜಿನಿಯರನನ್ನು ಮದುವೆಯಾಗಿದ್ದಾಳೆ.
(2) ಟೀನಾ ಚಾಂಡ್ಲರ್ ಎಂಬ ವೈದ್ಯನನ್ನು ಮದುವೆಯಾಗಿದ್ದಾಳೆ.
(3) ಲೀನಾ ವೈದ್ಯನನ್ನು ಮದುವೆ ಆಗಿದ್ದಾಳೆ.
(4) ಟೀನಾ ಚಾಂಡ್ಲರ್ ಎಂಬ ಇಂಜಿನಿಯರನನ್ನು ಮದುವೆಯಾಗಿದ್ದಾಳೆ.

47. ಪಟ್ಟಿ I ರಲ್ಲಿನ ಘಟನೆಗಳೊಂದಿಗೆ ಪಟ್ಟಿ II ರಲ್ಲಿನ ಅವುಗಳ ಫಲಿತಾಂಶಗಳನ್ನು ಹೊಂದಿಸಿರಿ :

| *ಪಟ್ಟಿ I* *(ಘಟನೆಗಳು)* | *ಪಟ್ಟಿ II* *(ಫಲಿತಾಂಶಗಳು)* |
|---|---|
| A. ಮಾರ್ಲೆ ಮಿಂಟೊ ಸುಧಾರಣೆಗಳು | I. ದೇಶಾದ್ಯಂತ ಕ್ಷೋಭೆ / ಚಳುವಳಿ |
| B. ಸೈಮನ್ ಆಯೋಗ | II. ಚಳುವಳಿಯ ಹಿಂಪಡೆಯುವಿಕೆ |
| C. ಚೌರಿ ಚೌರಾ ಘಟನೆ | III. ಕೋಮುವಾರು ಮತದಾರರ ಸಮುದಾಯ |
| D. ದಂಡಿ ಸತ್ಯಾಗ್ರಹ | IV. ಕೋಮುವಾರು ಆಸ್ಫೋಟಗಳು |
| | V. ಉಪ್ಪಿನ ಕಾನೂನುಬದ್ಧವಲ್ಲದ ಉತ್ಪಾದನೆ |


ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | III | IV | V | II |
| (2) | IV | I | II | III |
| (3) | II | III | IV | V |
| (4) | III | I | II | V |



Scanned by CamScanner

48. ಈ ಚಿತ್ರವನ್ನು ಎಚ್ಚರಿಕೆಯಿಂದ ಓದಿ ಆಯತವು ಕಲಾವಿದರನ್ನು, ವೃತ್ತವು ಆಟಗಾರರನ್ನು ಮತ್ತು ತ್ರಿಭುಜವು ವೈದ್ಯರನ್ನು ಪ್ರತಿನಿಧಿಸುತ್ತದೆ. ಕಲಾವಿದರೂ ಅಥವಾ ವೈದ್ಯರೂ ಅಲ್ಲದ ಆಟಗಾರರು ಎಷ್ಟು ಮಂದಿ ಇದ್ದಾರೆ ?




(1) 22
(2) 25
(3) 27
(4) 29

49. ಎರಡು ರೈಲು ಟಿಕೆಟ್‌ಗಳು ಮಂಗಳೂರಿಂದ ಉಡುಪಿಗೆ ಮತ್ತು ಮೂರು ರೈಲು ಟಿಕೆಟ್‌ಗಳು ಮಂಗಳೂರಿನಿಂದ ಕಾಸರಗೋಡಿಗೆ ಕೊಂಡಾಗ ರೂ. 77 ಆಗುತ್ತದೆ. ಆದರೆ ಮಂಗಳೂರಿನಿಂದ ಉಡುಪಿಗೆ ಮೂರು ಟಿಕೆಟುಗಳು, ಮಂಗಳೂರಿನಿಂದ ಕಾಸರಗೋಡಿಗೆ ಎರಡು ಟಿಕೆಟ್‌ಗಳ ಬೆಲೆ ರೂ. 73 ಆಗುತ್ತದೆ. ಮಂಗಳೂರಿನಿಂದ ಉಡುಪಿ ಹಾಗೂ ಕಾಸರಗೋಡಿಗೆ ಅನುಕ್ರಮವಾಗಿ ಟಿಕೆಟ್‌ಗಳ ದರ ವೆಷ್ಟು?

(1) ₹ 12, ₹ 16
(2) ₹ 13, ₹ 16
(3) ₹ 13, ₹ 17
(4) ₹ 17, ₹ 13

50. ಇವು ಬಲವಂತರಾಯ್ ಮೆಹ್ತಾ ಸಮಿತಿಯು ಶಿಫಾರಸ್ಸು ಮಾಡಿದ ಮೂರು ಹಂತದ ಪಂಚಾಯತಿ ರಾಜ್ ವ್ಯವಸ್ಥೆಯೆಂದರೆ

(1) ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್
(2) ಗ್ರಾಮ ಪಂಚಾಯತ್, ತಾಲ್ಲೂಕು ಸಮಿತಿ, ಜಿಲ್ಲಾ ಪಂಚಾಯತ್
(3) ಗ್ರಾಮ ಪಂಚಾಯತ್, ಪಂಚಾಯತ್ ಸಮಿತಿ, ಜಿಲ್ಲಾ ಪರಿಷತ್
(4) ಗ್ರಾಮ ಪಂಚಾಯತ್, ಮಂಡಲ ಪಂಚಾಯತ್, ಜಿಲ್ಲಾ ಪರಿಷತ್ತು

51. ಗುರುತ್ವಾಕರ್ಷಣದ ತರಂಗಗಳಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?

(1) ಗುರುತ್ವಾಕರ್ಷಣದ ತರಂಗಗಳ ಬಗ್ಗೆ ಆಲ್ಬರ್ಟ್ ಐನ್‌ಸ್ಟೀನ್‌ರು ಒಂದು ಶತಮಾನದ ಹಿಂದೆಯೇ ಅವರ ಪ್ರಧಾನ ಸಾಪೇಕ್ಷತಾ ಸಿದ್ಧಾಂತದ ಭಾಗವಾಗಿ ಭವಿಷ್ಯವನ್ನು ನುಡಿದಿದ್ದರು.
(2) ಗುರುತ್ವಾಕರ್ಷಣ ಅಲೆಗಳು ಕಪ್ಪು ರಂಧ್ರಗಳ ಸಂಘಟ್ಟನೆ ಅಥವಾ ನಾಕ್ಷತ್ರಿಕ ತಿರುಳು / ದಿಂಡಿನ ಕುಸಿತದಂತಹ ಅತಿ ವ್ಯಗ್ರ ಪ್ರಕ್ರಿಯೆಯಿಂದ ಉಂಟಾಗುತ್ತವೆ.
(3) ಯುನೈಟೆಡ್ ಸ್ಟೇಟ್ಸ್‌ನ ಖಗೋಳ ಭೌತವಿಜ್ಞಾನಿಗಳಾದ ರೇನಿಯರ್ ವೈಸ್, ಬ್ಯಾರಿ ಬ್ಯಾರಿಷ್ ಮತ್ತು ಕಿಪ್ ಥಾರ್ನ್ ಇವರು 2017 ರ ಭೌತಶಾಸ್ತ್ರದ ನೋಬೆಲ್ ಪಾರಿತೋಷಕವನ್ನು ಗಳಿಸಿದ್ದು ಗುರುತ್ವಾಕರ್ಷಣದ ತರಂಗಗಳ ವೀಕ್ಷಣೆಗಾಗಿ, ಈ ವಿದ್ಯಮಾನವು (ಸಾರ್ವತ್ರಿಕ) ಪರಮಾವಧಿ ವಿಶ್ವದೆಡೆಗೆ ಬಾಗಿಲನ್ನು ತೆರೆಯಿತು.
(4) ಮೇಲಿನ ಎಲ್ಲವೂ



Scanned by CamScanner

52. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ವೇತನ ಮತ್ತು ಭತ್ಯೆಗಳನ್ನು ಭರಿಸುವುದು

(1) ಭಾರತದ ಕ್ರೋಢೀಕೃತ ನಿಧಿ

(2) ರಾಜ್ಯದ ಕ್ರೋಢೀಕೃತ ನಿಧಿ

(3) ಭಾರತದ ಸಾದಿಲ್ವಾರು ನಿಧಿ

(4) ರಾಜ್ಯದ ಸಾದಿಲ್ವಾರು ನಿಧಿ

53. ಪಟ್ಟಿ I ರಲ್ಲಿನ ಅಣೆಕಟ್ಟು / ಜಲಾಶಯಗಳೊಡನೆ ಪಟ್ಟಿ II ರಲ್ಲಿನ ಅವುಗಳ ಹೆಸರುಗಳನ್ನು ಹೊಂದಿಸಿ :

| ಪಟ್ಟಿ I (ಅಣೆಕಟ್ಟುಗಳು / ಜಲಾಶಯಗಳು) | ಪಟ್ಟಿ II (ಹೆಸರುಗಳು) |
|---|---|
| A. ಆಲಮಟ್ಟಿ | I. ರೇಣುಕಾ ಸಾಗರ್ |
| B. ನಾರಾಯಣಪುರ | II. ಲಾಲ್ ಬಹದ್ದೂರ್ ಶಾಸ್ತ್ರಿ |
| C. ತುಂಗಭದ್ರಾ | III. ಬಸವ ಸಾಗರ |
| D. ಮಲಪ್ರಭಾ | IV. ಪಂಪಾ ಸಾಗರ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | IV | III | II | I |
| (3) | II | III | IV | I |
| (4) | III | I | IV | II |

54. 2017 ರ ಜುಲೈ 21 ರಿಂದ ಜುಲೈ 24 ರ ವರೆಗೆ 2017 ರ ಕನ್ನಡ ಚಲನ ಚಿತ್ರೋತ್ಸವವನ್ನು ಕೆಳಗಿನ ಯಾವ ಸ್ಥಳಗಳಲ್ಲಿ ನಡೆಸಲಾಯಿತು ?

(1) ಕೋಲ್ಕತ್ತಾ

(2) ಮುಂಬಯಿ

(3) ಪಣಜಿ

(4) ಭೋಪಾಲ್

55. ಪ್ರೊ. ಸಿ.ಎನ್.ಆರ್. ರಾವ್ ಅವರು ಭಾರತ ರತ್ನ ಪ್ರಶಸ್ತಿಯನ್ನು ಈ ಕೆಳಗಿನ ಯಾವ ವರ್ಷದಲ್ಲಿ ಪಡೆದರು ?

(1) 2012

(2) 2013

(3) 2014

(4) 2015

56. ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನಿಂದ 100 ಮಿಲಿಯನ್ ಡಾಲರ್ ಸಾಲವನ್ನು ಭಾರತದ ಸೂರುಮೇಲಣಸೌರ ಯೋಜನೆಗಳಿಗೆ ನೆರವಾಗಲು ಭಾರತದ ಯಾವ ಬ್ಯಾಂಕು ಪಡೆಯಿತು ?

(1) ಐ.ಸಿ.ಐ.ಸಿ.ಐ. ಬ್ಯಾಂಕು

(2) ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್.ಬಿ.ಐ.)

(3) ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿ.ಎನ್.ಬಿ.)

(4) ಅಲಹಾಬಾದ್ ಬ್ಯಾಂಕು

57. ಘನತ್ಯಾಜ್ಯ ನಿರ್ವಹಣಾ ನಿಯಮಗಳು 2016, ಅನ್ನು ಈ ಅವಕಾಶದಆಧಾರದಡಿಯಲ್ಲಿ ಅಧಿಸೂಚಿಸಲಾಯಿತು ?

(1) ಪರಿಸರ (ರಕ್ಷಣಾ) ಕಾಯ್ದೆ, 1986

(2) ನೀರು (ಮಾಲಿನ್ಯ ನಿಯಂತ್ರಣ ಮತ್ತು ತಡೆಗಟ್ಟುವಿಕೆ) ಕಾಯ್ದೆ, 1974

(3) ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ, 1964

(4) ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, 1976



Scanned by CamScanner

**58.** ಈ ಕೆಳಗಿನವುಗಳಲ್ಲಿ ಯಾವುವು ಕೇಂದ್ರ ಪಟ್ಟಿಗೆ ಸೇರಿದ ವಿಷಯಗಳಾಗಿದೆ ?

A. ಬ್ಯಾಂಕಿಂಗ್, ವಿಮೆ ಮತ್ತು ಚುನಾವಣೆಗಳು

B. ಸಾರ್ವಜನಿಕ ಆರೋಗ್ಯ, ಅರಣ್ಯಗಳು ಮತ್ತು ಎಸ್ಟೇಟ್ ತೆರಿಗೆ

C. ಡ್ರಗ್ಸ್ (ಔಷಧಗಳು), ಕಾರ್ಮಿಕ ಒಕ್ಕೂಟ ಮತ್ತು ಸ್ಟ್ಯಾಂಪ್ ಸುಂಕಗಳು

D. ವಿಮಾನಯಾನ, ಟೆಲಿಫೋನ್, ಸುಂಕಗಳು ಮತ್ತು ಅಬಕಾರಿ ತೆರಿಗೆಗಳು

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಮಾತ್ರ

(2) A, B ಮತ್ತು C ಮಾತ್ರ

(3) A ಮತ್ತು D ಮಾತ್ರ

(4) B, C ಮತ್ತು D ಮಾತ್ರ

**59.** ಈ ಕೆಳಗಿನವುಗಳಲ್ಲಿ ರಾಷ್ಟ್ರೀಯ ನಗರ ಜೀವನೋಪಾಯ ನಿಯೋಗದ ಉಪಭಾಗಗಳಾವುವು ?

A. ಸಮುದಾಯ ಸಂಸ್ಥೆಗಳ ರಚನೆ : ಎಸ್.ಹೆಚ್.ಜಿ.ಗಳು ಮತ್ತು ಅವುಗಳ ಫೆಡರೇಷನ್‌ಗಳು

B. ಸಾರ್ವತ್ರಿಕ ಆರ್ಥಿಕ ಸೇರ್ಪಡೆ

C. ನಗರ ಜೀವನೋಪಾಯ ಕೇಂದ್ರಗಳು

D. ನಗರ ಉದ್ಯೋಗ ವೇತನ

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಮಾತ್ರ

(2) A, B ಮತ್ತು C ಮಾತ್ರ

(3) A ಮತ್ತು C ಮಾತ್ರ

(4) A, B, C ಮತ್ತು D

**60.** ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಾಗಿ ಮತ್ತೊಂದು ಅವಧಿಗೆ ಭಾರತದಿಂದ ಪುನರ್ ನಾಮ ನಿರ್ದೇಶನ ಗೊಂಡವರು ಯಾರು ?

(1) ಧನಂಜಯ ಚಂದ್ರಚೂಡ

(2) ಮದನ್ ಭೀಮ್‌ರಾವ್ ಲೋಕೂರ್

(3) ದಲವೀರ್ ಭಂಡಾರಿ

(4) ಹರೀಶ್ ಸಾಳ್ವೆ

**61.** ಅದೇ ವಾರದ ಯಾವ ದಿನದಲ್ಲಿ ರಮೇಶ್‌ನ ಪರೀಕ್ಷೆ ನಿಗದಿಯಾಗಿದೆ (ಸೋಮವಾರವುವಾರದ ಮೊದಲದಿನ) ?

A. ರಮೇಶನು ಮಂಗಳವಾರವಾದ 1 ದಿನದ ನಂತರ ಆದರೆ ಗುರುವಾರಕ್ಕೆ ಮುಂಚೆ ಅವನ ಪರೀಕ್ಷೆ ಇದೆ ಎಂದು ಸರಿಯಾಗಿ ನೆನಪಿಟ್ಟುಕೊಂಡಿದ್ದಾನೆ.

B. ರಮೇಶನ ಗೆಳೆಯನು ರಮೇಶನ ಪರೀಕ್ಷೆಯು ವಾರದ ಮೂರನೇ ದಿನದಂದು ಇದೆ ಎಂದು ಸರಿಯಾಗಿ ನೆನಪಿಟ್ಟು ಕೊಂಡಿದ್ದಾನೆ.

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಹೇಳಿಕೆಯೊಂದೇ ಸಾಕು ಆದರೆ B ಹೇಳಿಕೆಯೊಂದೇ ಕೇಳಿರುವ ಪ್ರಶ್ನೆಗೆ ಉತ್ತರಿಸಲು ಸಾಕಾಗುವುದಿಲ್ಲ

(2) A ಮತ್ತು B ಎರಡೂ ಹೇಳಿಕೆಗಳು ಒಟ್ಟಿಗೆ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತವೆ ಆದರೆ ಯಾವುದೇ ಒಂದು ಪ್ರತ್ಯೇಕ ಹೇಳಿಕೆಯು ಸಾಕಾಗುವುದಿಲ್ಲ

(3) B ಹೇಳಿಕೆಯೊಂದೇ ಸಾಕಾಗುತ್ತದೆ ಆದರೆ A ಹೇಳಿಕೆಯೊಂದರಿಂದಲೇ ಕೇಳಿರುವ ಪ್ರಶ್ನೆಗೆ ಉತ್ತರಿಸಲು ಸಹಾಯಕವಾಗುವುದಿಲ್ಲ

(4) ಪ್ರಶ್ನೆಗೆ ಉತ್ತರಿಸಲು ಪ್ರತಿಯೊಂದು ಹೇಳಿಕೆಯೂ ತಾನೊಂದೇ ಸಾಕಾಗುತ್ತದೆ.



Scanned by CamScanner

62. ಈ ಕೆಳಗಿನ ಪ್ರಶ್ನೆಯಲ್ಲಿ ಎರಡು ಊಹೆ (A ಮತ್ತು B) ಗಳನ್ನು ಒಳಗೊಂಡಿರುವ ಹೇಳಿಕೆಯನ್ನು ನೀಡಲಾಗಿದೆ,ಯಾವ ಊಹೆಯು/ಗಳು ಹೇಳಿಕೆಯಲ್ಲಿ ಧ್ವನಿತವಾಗಿದೆ ಎಂಬುದನ್ನು ನೀವು ನಿರ್ಧರಿಸಬೇಕು.

ಹೇಳಿಕೆ:

ಕಾಮತ್ ಪಬ್ಲಿಕೇಷನ್ ನಿಂದ ಪ್ರಕಟಿಸಿದ ಪುಸ್ತಕವು ಅಪರಿಣತನಿಗೆ ಉಪಾಧ್ಯಾಯರ ಅನುಪಸ್ಥಿತಿಯಲ್ಲಿ ತಾರ್ಕಿಕ ವಿಧಾನದ ಅಧ್ಯಯನದಲ್ಲಿ ಮಾರ್ಗದರ್ಶನ ಮಾಡಲು ಉದ್ದೇಶಿಸಿದೆ.

ಊಹೆಗಳು:

A. ತಾರ್ಕಿಕ ಸಮರ್ಥನೆ (ಕಾರಣ ಹುಡುಕುವ) ಯನ್ನು ಒಂದು ಪುಸ್ತಕದ ಸಹಾಯದಿಂದ ಕಲಿಯಬಹುದು.

B. ತಾರ್ಕಿಕ ಸಮರ್ಥನೆಯ ಅಧ್ಯಾಪಕರು ಪ್ರತಿಯೊಬ್ಬರಿಗೂ ಲಭ್ಯವಿಲ್ಲದೇ ಇರಬಹುದು.

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) ಊಹೆ A ಮಾತ್ರ ಧ್ವನಿಸುತ್ತದೆ

(2) ಊಹೆ B ಮಾತ್ರ ಧ್ವನಿಸುತ್ತದೆ

(3) A ಮತ್ತು B ಇವೆರಡೂ ಧ್ವನಿಸುತ್ತವೆ

(4) A ಆಗಲೀ ಅಥವಾ B ಆಗಲೀ ಸೂಚ್ಯವಲ್ಲ

63. ನ್ಯಾಷನಲಿಸ್ಟ್ ಪಕ್ಷದ ಸ್ಥಾಪಕರಾರು ?

(1) ಖಾನ್ ಅಬ್ದುಲ್ ಗಫಾರ್ ಖಾನ್

(2) ಅಸಫ್ ಅಲಿ

(3) ಮೌಲಾನಾ ಅಬುಲ್ ಕಲಾಂ ಅಜಾದ್

(4) ಎಮ್.ಸಿ. ಚಗಲಾ

64. ಈ ಹೇಳಿಕೆಗಳನ್ನು ಗಮನಿಸಿ :

A. ಚಂಪಾರಣ್ಯ ಸತ್ಯಾಗ್ರಹವು ಗಾಂಧೀಜಿಯವರು ಜನನಾಯಕರಾಗಿ ಭಾರತದ ರಾಜಕಾರಣದಲ್ಲಿವ ಎರಡನೇ ಪ್ರವೇಶವನ್ನು ಗುರ್ತಿಸಿತು.

B. ಚಂಪಾರಣ್ಯ ಸತ್ಯಾಗ್ರಹವು (ಇಂಡಿಗೋ) ನೀಲಿಬೆಳೆಯ ತೋಟಗಾರಿಕೆ ಕಾರ್ಮಿಕರು ಎದುರಿಸುತ್ತಿದ್ದ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಚಾಲ್ತಿಗೆ ತರಲಾಯಿತು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಇವೆರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ

65. 1939 ರಲ್ಲಿ ಕಾಂಗ್ರೆಸ್ ಸಚಿವರುಗಳು ಏಳು ಸಂಸ್ಥಾನಗಳಲ್ಲಿ ರಾಜೀನಾಮೆಯನ್ನು ನೀಡಲು ಕಾರಣವೆಂದರೆ

(1) ಉಳಿದ ನಾಲ್ಕು ಸಂಸ್ಥಾನಗಳಲ್ಲಿ ಕಾಂಗ್ರೆಸ ಸಚಿವ ಸಂಪುಟವನ್ನು ರಚಿಸಲು ಸಾಧ್ಯವಾಗದಿದ್ದುದು.

(2) ಸಚಿವಾಲಯಗಳು ಕಾರ್ಯನಿರ್ವಹಿಸದಂತೆ ಮಾಡಿದ ಕಾಂಗ್ರೆಸನ ಎಡ ಪಂಥೀಯರ ಹುಟ್ಟು.

(3) ಅವರ ಪ್ರಾಂತ್ಯಗಳಲ್ಲಿ ಕೋಮು ಗಲಭೆಯು ವ್ಯಾಪಕವಾಗಿ ಹರಡಿದ್ದು.

(4) ಈ ಮೇಲಿನ ಯಾವುವೂ ಅಲ್ಲ



Scanned by CamScanner

66. ಈ ಹೇಳಿಕೆಗಳ ಪೈಕಿ ಔರಂಗ್‌ಜೇಬ್‌ಗೆ ಸಂಬಂಧಿಸಿದಂತೆ ಸರಿಯಾದದ್ದು ಯಾವುವು ?

A. ಅವನ ದೀರ್ಘ ಆಳ್ವಿಕೆಯಲ್ಲಿ ಮುಘಲ್ ರಾಜ್ಯವು ಗಡಿಯ ಉತ್ತುಂಗತೆ ತಲುಪಿತು.

B. ಆತ ಜಾತ್ಯಾತೀತ ಶ್ರೇಣಿಗಳನ್ನು ಜಾರಿ ಮಾಡಿದ್ದು ಅದನ್ನು 'ಜವಾಬಿಟ್ಸ್' ಎನ್ನುತ್ತಾರೆ.

C. 'ನೌರೋಜ್' ಹಬ್ಬವನ್ನು ಆತ ಮುಂದುವರಿಸಲಿಲ್ಲ.

D. ಅವನು 'ಝುರೋಖಾ ದರ್ಶನ್' ಪದ್ಧತಿಯನ್ನು ನಿಲ್ಲಿಸಿದನು.

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A, B ಮತ್ತು C ಮಾತ್ರ

(2) B, C ಮತ್ತು D ಮಾತ್ರ

(3) A, C ಮತ್ತು D ಮಾತ್ರ

(4) A, B, C ಮತ್ತು D

67. ಅಕ್ಬರನ 'ದೀನ್-ಇ-ಇಲಾಹಿ' ಯು ಯಶಸ್ವಿಯಾಗದಿರಲು ಕಾರಣ

(1) ಅಕ್ಬರನ ಅನಂತರ ಯಾರೂ ಅದನ್ನು ಪ್ರೋತ್ಸಾಹಿಸಲಿಲ್ಲ.

(2) ಇತರ ಧಾರ್ಮಿಕ ಆಚರಣೆಗಳನ್ನು ಮುಸ್ಲಿಮರು ಒಪ್ಪಲಿಲ್ಲ.

(3) ಜನರಿಗೆ ಅದನ್ನು ಸೂಕ್ತವಾಗಿ ಬಿಂಬಿಸಿರಲಿಲ್ಲ.

(4) ಈ ಮೇಲಿನ ಎಲ್ಲವೂ

68. ಒಳ ಸಂಚನ್ನು ಮಟ್ಟಹಾಕಲು ಸುಲ್ತಾನನು ಔತಣಗಳು ಮತ್ತು ಸಭೆಗಳನ್ನು ನಿಷೇಧಿಸಿದನು ಮತ್ತು ದೇಶವನ್ನು ತನ್ನ ಬೇಹುಗಾರರಿಂದ ತುಂಬಿಸಿದನು ?

(1) ಬಲ್ಬನ್

(2) ಅಲ್ಲಾಉದ್ದೀನ್ ಖಿಲ್ಜಿ

(3) ಮುಹಮ್ಮದ್-ಬಿನ್-ತುಗಲಖ್

(4) ಇಲ್ತುತಮಿಷ್

69. ಈ ಪೈಕಿ ಸರಿಹೊಂದಾಣಿಕೆ ಅಲ್ಲದ ಜೋಡಿ ಯಾವುದು ?

(1) ಅಬುಲ್ ಫಜಲ್ – ಐನ್-ಇ-ಅಕ್ಬರಿ

(2) ಅಬ್ದುಲ್ ಹಮೀದ್ ಲಾಹೋರಿ – ಪದಷಾನಾಮಾ

(3) ಜಿಯಾಉದ್ದೀನ್ ಬರಾನಿ – ತಾರಿಖ್-ಇ-ಫಿರೋಜ ಷಾಹಿ

(4) ಅಬ್ದುಲ್ ಕದಿರ್ ಬದೌನಿ–ತಾರಿಖ್-ಇ-ಅಕ್ಬರಿ

70. 1809 ರಲ್ಲಿ ರಾಜಾರಾಮ್ ಮೋಹನ್ ರಾಯ ಬರೆದ ಪುಸ್ತಕ ತೂಫತ್-ಉಲ್-ಮುವಾಹಿದ್ದೀನ್ (ಏಕ ದೈವ ವಾದಿಗಳಿಗೆ ಕೊಡುಗೆ). ದಲ್ಲಿ ಜನರು ಏಕದೇವಾರಾಧಕರಾಗಬೇಕೆಂದು ಅವರು ಪ್ರತಿಪಾದಿಸಿದರು. ಈ ಕೆಳಗಿನ ಯಾವ ಭಾಷೆಯಲ್ಲಿ ಇದನ್ನು ಬರೆಯಲಾಗಿದೆ ?

(1) ಇಂಗ್ಲೀಷ್

(2) ಪರ್ಷಿಯನ್

(3) ಬೆಂಗಾಲಿ

(4) ಅರೇಬಿಕ್



Scanned by CamScanner

71. ಈ ಕೆಳಗಿನವುಗಳಲ್ಲಿ ಯಾವುದು ಭಾರತದ ಡೇನಿಷ್ ಸುಲ್ತಾನೀಯರ ಕೇಂದ್ರ ಸ್ಥಾನ ವಾಗಿತ್ತು ?

(1) ಟ್ರಾಂಕಿಬಾರ್

(2) ಸೆರಾಮ್‌ಪೂರ್

(3) ಕೊಚ್ಚಿನ್

(4) ನಾಗಪಟ್ಟಿಣಮ್

72. ವಾಂಡಿವಾಷ್‌ನ ಯುದ್ಧ ನಡೆದದ್ದು ಇವರ ನಡುವೆ

(1) ಹೈದರಾಬಾದಿನ ನಿಜಾಮ ಮತ್ತು ಫ್ರೆಂಚರು

(2) ಬ್ರಿಟಿಷರು ಮತ್ತು ಫ್ರೆಂಚರು

(3) ಬ್ರಿಟಿಷ್ ಮತ್ತು ಹೈದರಾಲಿ

(4) ಕಾರ್ನಾಟಿಕ್ ನವಾಬ ಮತ್ತು ಇಂಗ್ಲೀಷರು

73. ಟೋಕನ್ ನಾಣ್ಯವನ್ನು ಮೊಹಮದ್-ಬಿನ್-ತುಘಲಖ್ ಜಾರಿಗೆ ತಂದದ್ದು ಈ ಕೆಳಗಿನ ಯಾವ ಕಾರಣದಿಂದ ಯಶಸ್ವಿ ಆಗಲಿಲ್ಲ?

(1) ಬೆಳ್ಳಿಯ ನಾಣ್ಯ (ಟೋಕನ್) ವನ್ನು ಟಂಕಿಸಲು ಬೇಕಾದ ಬೆಳ್ಳಿಯ ಕೊರತೆ ಅಧಿಕವಾದದ್ದು

(2) ಮಾರಾಟಗಾರರು ಟೋಕನ್ (ಸಂಕೇತ) ನಾಣ್ಯವನ್ನು ನಿರಾಕರಿಸಿದ್ದು

(3) ಖೋಟಾ (ಟೋಕನ್) ನಾಣ್ಯ ಚಲಾವಣೆಯ ವ್ಯಾಪಕತೆ

(4) ವಿದೇಶಿ ವ್ಯಾಪಾರ ಅತಿಯಾಗಿ ಕಂಗೆಟ್ಟಿದ್ದು

74. ಪಟ್ಟಿ I (ಕಣಗಳು) ಮತ್ತು ಪಟ್ಟಿ II (ಸಂಶೋಧಕರು) ರೊಂದಿಗೆ ಹೊಂದಿಸಿ :

| *ಪಟ್ಟಿ I* (*ಕಣಗಳು*) | *ಪಟ್ಟಿ II* (*ಸಂಶೋಧಕರು*) |
|---|---|
| A. ಪ್ರೋಟಾನ್ | I. ರುದರ್‌ಫರ್ಡ್ |
| B. ಇಲೆಕ್ಟ್ರಾನ್ | II. ಚಾಡ್ವಿಕ್ |
| C. ನ್ಯೂಟ್ರಾನ್ | III. ಥಾಮ್ಸನ್ |
| D. ನ್ಯೂಕ್ಲಿಯಸ್ | IV. ಗೋಲ್ಡ್‌ಸ್ಟೀನ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | IV | III | II | I |
| (2) | II | IV | III | I |
| (3) | III | I | II | IV |
| (4) | I | III | II | IV |

75. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಲೋಲಕದ ಉದ್ದವನ್ನು ಹೆಚ್ಚುಗೊಳಿಸಿದರೆ ಸರಳ ಲೋಲಕದ ವೇಳೆಯ ಅವಧಿಯೂ ಹೆಚ್ಚುತ್ತದೆ.

B. ಲೋಲಕದ ವೇಳೆಯ ಅವಧಿಯು ಅದರ ಗುಂಡಿನ ರಾಶಿಯನ್ನ ವಲಂಬಿಸದು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಇವೆರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ



Scanned by CamScanner

76. ರಾಷ್ಟ್ರೀಯ ಸಮಗ್ರ ಉತ್ಪಾದನೆಯು ಮಾರುಕಟ್ಟೆಯ ದರದಲ್ಲಿ ಹೀಗೆ ನಿರೂಪಿತವಾಗಿದೆ

(1) ಆರ್ಥಿಕತೆಯಲ್ಲಿ ಉತ್ಪಾದನೆ ಆದ ಎಲ್ಲಾ ಅಂತಿಮ ಸರಕು ಮತ್ತು ಸೇವೆಗಳ ಮಾರುಕಟ್ಟೆ ಬೆಲೆ ಹಾಗೂ ವಿದೇಶದಿಂದ ಬಂದ ಆದಾಯದ ಅಂಶಗಳನ್ನು ಗಣನೆಗೆ ತೆಗೆದುಕೊಂಡಿದ್ದು.

(2) ಆರ್ಥಿಕತೆಯಲ್ಲಿ ಉತ್ಪಾದನೆ ಆದ ಎಲ್ಲಾ ಅಂತಿಮ ಸರಕುಗಳು ಮತ್ತು ಸೇವೆಗಳ ಮಾರುಕಟ್ಟೆ ಬೆಲೆ.

(3) ಆರ್ಥಿಕತೆಯಲ್ಲಿ ಉತ್ಪಾದನೆ ಆದ ಎಲ್ಲಾ ಅಂತಿಮ ಸರಕುಗಳು ಮತ್ತು ಸೇವೆಗಳ ಮಾರುಕಟ್ಟೆ ಬೆಲೆ ಮತ್ತು ಪರೋಕ್ಷ ತೆರಿಗೆಗಳು.

(4) ಆರ್ಥಿಕತೆಯಲ್ಲಿ ಉತ್ಪಾದನೆ ಆದ ಎಲ್ಲಾ ಅಂತಿಮ ಸರಕು ಮತ್ತು ಸೇವೆಗಳ ಮಾರುಕಟ್ಟೆ ಬೆಲೆ ಹಾಗೂ ಪರೋಕ್ಷ ತೆರಿಗೆಗಳು ಸಬ್ಸಿಡಿ ಕಳೆದದ್ದು.

77. ಭಾರತದ ವಿದ್ಯುತ್ ಉತ್ಪಾದನೆಯಲ್ಲಿ ಅಧಿಕ ಪಾಲು ಈ ಬಗೆಯದ್ದು

(1) ಜಲವಿದ್ಯುತ್

(2) ಉಷ್ಣ (ಥರ್ಮಲ್)

(3) ಸೌರ

(4) ನ್ಯೂಕ್ಲಿಯರ್

78. ಈ ಪೈಕಿ ಯಾವುದು ಭಾರತೀಯ ರೇಲ್ವೆಗಳ ಗರಿಷ್ಠಗಳಿಕೆಗೆ ಕೊಡುಗೆಯನ್ನಿತ್ತಿದೆ ?

(1) ಪ್ರಯಾಣಿಕರ ಗಳಿಕೆಗಳು

(2) ಸರಕುಸಾಗಣೆಯಿಂದ ಗಳಿಕೆಯಾದದ್ದು

(3) ಇತರೆ ಗಳಿಕೆಗಳು

(4) ಇತರೆ ಕೋಚ್ (ಡಬ್ಬಿಗಳ) ಗಳಿಕೆ

79. ಈ ಕೆಳಗಿನ ಯಾವ ಕ್ರಾಂತಿಕಾರಿಗಳು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿರುವ ಯುನೈಟೆಡ್ ಇಂಡಿಯಾ ಹೌಸ್‌ನ ರಚನೆಯನ್ನು ಮಾಡಿದರು ?

(1) ರಾಮನಾಥ್ ಪುರಿ ಮತ್ತು ವೀರ್ ಸಾವರ್ಕರ್

(2) ತಾರಕ್‌ನಾಥ್ ದಾಸ್ ಮತ್ತು ಜಿ.ಡಿ. ಕುಮಾರ್

(3) ಲಾಲಾ ಹರ್‌ದಯಾಳ್ ಮತ್ತು ಭಗತ ಸಿಂಗ್

(4) ಹರ್‌ನಾಮ್ ಸಿಂಗ್ ಮತ್ತು ಭಗವಾನ್ ಸಿಂಗ್

80. ಭಾರತದ ವಸಾಹತು ಆಡಳಿತಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ವಿದ್ಯಮಾನಗಳನ್ನು ಪರಿಗಣಿಸಿ :

A. ಮಾರ್ಲೆ–ಮಿಂಟೋ ಸುಧಾರಣೆಗಳು

B. ಕಲ್ಕತ್ತಾದಿಂದ ದೆಹಲಿಗೆ ರಾಜಧಾನಿಯ ವರ್ಗಾವಣೆ

C. ಮೊದಲ ಮಹಾ ಯುದ್ಧ

D. ಲಕ್ನೌ ಒಪ್ಪಂದ

ಈ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) B, A, C, D

(2) B, A, D, C

(3) A, B, C, D

(4) A, B, D, C



Scanned by CamScanner

**81.** ಈ ಪೈಕಿ ಯಾರು ಮಂದಗಾಮಿಗಳು ?

A. ಜಿ.ಕೆ. ಗೋಖಲೆ

B. ದಾದಾಭಾಯಿ ನವರೋಜಿ

C. ಫಿರೋಜ ಷಾ ಮೆಹ್ತಾ

D. ಎಮ್.ಜಿ. ರಾನಡೆ

E. ಬಿ.ಜಿ. ತಿಲಕ್

F. ಬಿಪಿನ್ ಚಂದ್ರ ಪಾಲ್

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A, B, C, D ಮತ್ತು F

(2) A, B ಮತ್ತು C

(3) D, E ಮತ್ತು F

(4) A, B, C ಮತ್ತು D

**82.** ಭೂಮಿಯು ಕಕ್ಷಾ ತ್ರಿಜ್ಯ ಈಗಿನ ಮೌಲ್ಯದ $\frac{1}{4}$ ರಷ್ಟಾದರೆ ವರ್ಷದ ಅವಧಿ ಈಗಿನದಕ್ಕಿಂತ ಎಷ್ಟು ಪಟ್ಟು ಬದಲಾಗುತ್ತದೆ ?

(1) 8 ಪಟ್ಟು

(2) $\frac{1}{8}$ ಪಟ್ಟು

(3) 4 ಪಟ್ಟು

(4) $\frac{1}{4}$ ಪಟ್ಟು

**83.** 3 ಕಲ್ಲಂಗಡಿ ಹಣ್ಣಿನ ಬೆಲೆ 7 ಮಾವಿನ ಹಣ್ಣಿನಷ್ಟು 2 ಮಾವಿನಹಣ್ಣಿನ ಬೆಲೆ 3 ಕಿತ್ತಳೆ ಹಣ್ಣಿನಷ್ಟು ಇದ್ದು, 10 ಕಲ್ಲಂಗಡಿ ಹಣ್ಣನ್ನು ಕೊಳ್ಳುವ ಬೆಲೆಯ ಮೊತ್ತದಲ್ಲಿ ಎಷ್ಟು (ಗರಿಷ್ಠ) ಸಂಖ್ಯೆಯ ಹಣ್ಣುಗಳನ್ನು ಕೊಳ್ಳಬಹುದು. (ಪ್ರತಿ ಬಗೆಯಲ್ಲಿ ಕನಿಷ್ಠ ಪಕ್ಷ ಒಂದು ಹಣ್ಣಾದರೂ ಕೊಳ್ಳಲೇ ಬೇಕು)

(1) 22

(2) 32

(3) 33

(4) 34

**84.** ಈ ಹೇಳಿಕೆಗಳನ್ನು ಪರಿಗಣಿಸಿ :

A. ಭಾರತದ ಪ್ರಧಾನ ಬಂದರುಗಳನ್ನು ಪೋರ್ಟ್ ಟ್ರಸ್ಟ ಆಫ್ ಇಂಡಿಯಾ ನಿರ್ವಹಿಸುತ್ತದೆ. ಇದು ಕೇಂದ್ರ ಸರ್ಕಾರ ವ್ಯಾಪ್ತಿಯದಾಗಿದೆ.

B. ಕಿರಿಯ ಬಂದರುಗಳನ್ನೂ ಕೇಂದ್ರ ಸರ್ಕಾರವು ಆಯಾ ರಾಜ್ಯಸರ್ಕಾರಗಳ ನೆರವಿನೊಂದಿಗೆ ನಿಭಾಯಿಸುವುದು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಇವೆರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ

**85.** ಈ ಕ್ಷೇತ್ರಗಳ ಪೈಕಿ ಯಾವುದು "ರೆಸಿಡೆಕ್ಸ್" ಸೂಚಕದೊಂದಿಗೆ ಭಾರತೀಯ ಆರ್ಥಿಕತೆಯ ಸೇವಾ ವಲಯಕ್ಕೆ ಸಂಬಂಧಿಸಿದ್ದು ?

(1) ಸ್ಟಾಕ್ ವಿನಿಮಯಗಳಲ್ಲಿನ ಷೇರು ಬೆಲೆಗಳು

(2) ಭಾರತೀಯ ಬಂಡವಾಳ ಮಾರುಕಟ್ಟೆಗಳಲ್ಲಿ ಮ್ಯೂಚ್ಯುಯಲ್ ಫಂಡ್ ಬೆಲೆಗಳು

(3) ಸರಕು ಮಾರುಕಟ್ಟೆಗಳ ಪ್ರತೀಕ್ಷಾ ಬಿಂದು ಬೆಲೆಗಳು

(4) ರಿಯಲ್ ಎಸ್ಟೇಟ್ ವಲಯದಲ್ಲಿ ಜಮೀನು ಬೆಲೆಗಳು



Scanned by CamScanner

86. ಈ ಹೇಳಿಕೆಗಳ ಪೈಕಿ ಯಾವುದು ಸರಿ ?

A. ನಿಫ್ಟಿ 50 ಸೂಚ್ಯಂಕವು, ಭಾರತೀಯ ಈಕ್ವಿಟಿ ಮಾರುಕಟ್ಟೆಗಳಿಗಾಗಿ ಭಾರತದ ಬೆಂಚ್ ಮಾರ್ಕ್ ಸ್ಟಾಕ್ ಮಾರುಕಟ್ಟೆ ಸೂಚ್ಯಂಕದ ರಾಷ್ಟ್ರೀಯ ಸ್ಟಾಕ್ ಎಕ್ಸ್ ಚೇಂಜ್ ಆಗಿದೆ.

B. S & P ಸೆನ್ಸೆಕ್ಸ್‌ವು ಬಾಂಬೆ ಸ್ಟಾಕ್ ವಿನಿಮಯದಲ್ಲಿ (ಬಿ.ಎಸ್.ಇ.) ಪಟ್ಟಿಮಾಡಲಾದ ಕಂಪನಿಗಳಿಗೆ ಸಂಬಂಧಿಸಿದ್ದು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಇವೆರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ

87. ಅಂಕೋಲಾದ ಉಪ್ಪಿನ ಸತ್ಯಾಗ್ರಹ ಚಳುವಳಿಯ ನಾಯಕ / ರಾಗಿದ್ದವರು ಯಾರು ?

A. ಎಂ.ಪಿ. ನಾಡಕರ್ಣಿ

B. ಲಕ್ಷ್ಮಣ್ ವೆಂಕಟೇಶ್ ಕಾಮತ್

C. ಕೃಷ್ಣಾಬಾಯಿ ಪಂಜೇಕರ್

D. ಕೆ.ಟಿ. ಭಾಷ್ಯಂ

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) C ಮತ್ತು D ಮಾತ್ರ

(2) B ಮಾತ್ರ

(3) B ಮತ್ತು C ಮಾತ್ರ

(4) ಮೇಲಿನ ಯಾವುದೂ ಅಲ್ಲ

88. ಅನೀಶ್ ಮತ್ತು ರಮೇಶ್ ತಮ್ಮ ಬಳಿ ನಿರ್ದಿಷ್ಟ ಸಂಖ್ಯೆಯ ಚಾಕೋಲೇಟುಗಳನ್ನು ಹೊಂದಿದ್ದಾರೆ. ಅನೀಶನು 4 ಚಾಕಲೇಟುಗಳನ್ನು ರಮೇಶನಿಗೆ ನೀಡಿದರೆ, ಅನುಷನ ಬಳಿ ರಮೇಶನಲ್ಲಿನ ಚಾಕಲೇಟುಗಳ ಸಂಖ್ಯೆಯ ಎರಡರಷ್ಟರಷ್ಟಾಗುತ್ತದೆ. ರಮೇಶ ಎರಡು ಚಾಕಲೇಟ್‌ಗಳನ್ನು ಅನೀಶ್‌ನಿಗೆ ನೀಡಿದಲ್ಲಿ ಅನೀಶ್ ಬಳಿ ಇರುವ ಚಾಕಲೇಟ್‌ಗಳು ಸಂಖ್ಯೆಯು ರಮೇಶನ ಬಳಿ ಇರುವ ಐದುಪಟ್ಟು ಚಾಕಲೇಟ್‌ಗಳ ಸಂಖ್ಯೆಯಷ್ಟು ಆಗುತ್ತವೆ. ಒಟ್ಟಿಗೆ ಅವರು ಹೊಂದಿರುವ ಚಾಕ್‌ಲೇಟುಗಳ ಸಂಖ್ಯೆ ಎಷ್ಟು ?

(1) 26

(2) 32

(3) 34

(4) 36

89. ಪಟ್ಟಿ I (ಪಟ್ಟಣ) ಮತ್ತು ಪಟ್ಟಿ II ನ್ನು (ಅವುಗಳು ಇರುವ ಭೂಕಂಪವಲಯಗಳು) ಹೊಂದಿಸಿ :

| ಪಟ್ಟಿ I (ಪಟ್ಟಣ) | ಪಟ್ಟಿ II (ಭೂಕಂಪವಲಯ) |
|---|---|
| A. ಕೋಲ್ಕತ್ತಾ | I. ವಲಯ V |
| B. ಗುವಾಹಟಿ | II. ವಲಯ IV |
| C. ದೆಹಲಿ | III. ವಲಯ III |
| D. ಚೆನ್ನೈ | IV. ವಲಯ II |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | III | II | I | IV |
| (2) | III | I | II | IV |
| (3) | IV | I | II | III |
| (4) | IV | II | I | III |



Scanned by CamScanner

**90.** ಗಾಳಿಯ ಆರ್ದ್ರತೆಯನ್ನು ಅಳೆಯಲು ಈ ಕೆಳಗಿನವುಗಳಲ್ಲಿ ಯಾವ ಉಪಕರಣ ಬಳಕೆ ಆಗುತ್ತದೆ ?

(1) ಗಾಳಿ ದರ್ಶಕ

(2) ಅನೆರಾಯ್ಡ್ ವಾಯುಭಾರಮಾಪಕ

(3) ಒದ್ದೆ ಮತ್ತು ಶುಷ್ಕ ಬುರುಡೆಯ ಉಷ್ಣತಾಮಾಪಕ

(4) ಗರಿಷ್ಠ ಮತ್ತು ಕನಿಷ್ಠ ಉಷ್ಣತಾಮಾಪಕ

**91.** ಈ ಹೇಳಿಕೆಗಳ ಪೈಕಿ ಚಿನೂಕ್ ಮಾರುತಗಳಿಗೆ ಸಂಬಂಧಿಸಿದಂತೆ ಯಾವುದು ಸರಿಯಲ್ಲ?

(1) ಇವು ಸ್ಥಳೀಯ ಮಾರುತಗಳು.

(2) ಅವುಗಳು ಶಿಲಾಮಯ ಪರ್ವತದ ಇಳಿ ಜಾರಿನಿಂದ ಮತ್ತು ಮಧ್ಯ ಅಕ್ಷಾಂಶದವರೆಗೂ ಇಳಿಯುತ್ತವೆ.

(3) ಅವು ಅಧಿಕ ಮಳೆ ತರುವಂತಹವು.

(4) ಅವು ಕೃಷಿಗೆ ಉಪಯುಕ್ತ.

**92.** ಪಟ್ಟಿ I (ರಾಷ್ಟ್ರೀಯ ಉದ್ಯಾನಗಳು) ಮತ್ತು ಪಟ್ಟಿ II ಅವುಗಳು ನೆಲೆಸಿರುವ ರಾಜ್ಯಗಳನ್ನು ಹೊಂದಿಸಿ :

| *ಪಟ್ಟಿ I (ರಾಷ್ಟ್ರೀಯ ಉದ್ಯಾನಗಳು)* | *ಪಟ್ಟಿ II (ರಾಜ್ಯಗಳು)* |
|---|---|
| A. ಎರವಿಕುಲಮ್ | I. ಕರ್ನಾಟಕ |
| B. ಅಂಶಿ | II. ಕೇರಳ |
| C. ಹೆಮಿಸ್ | III. ಮಣಿಪುರ್ |
| D. ಸಿರೋಹಿ | IV. ಜಮ್ಮು ಮತ್ತು ಕಾಶ್ಮೀರ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | II | I | IV | III |
| (2) | III | IV | II | I |
| (3) | II | I | III | IV |
| (4) | I | IV | III | II |

**93.** ಈ ಪೈಕಿ ಕೀಟಾಹಾರಿ ಸಸ್ಯ ಯಾವುದು ?

(1) ಪ್ಯಾಸ್ಸನ್ ಪುಷ್ಪ ಸಸ್ಯ

(2) ಪಿಚ್ಚರ್ ಸಸ್ಯ

(3) ರಾತ್ರಿ ರಾಣಿ

(4) ಫ್ಲೇಮ್ ಆಫ್ ದಿ ಫಾರೆಸ್ಟ್ (ಕಾಡಿನ ಜ್ವಾಲಿ)

**94.** ಪಟ್ಟಿ I (ಬೆಳೆಗಳು) ಮತ್ತು ಪಟ್ಟಿ II (ಬಳಕೆ ಮಾಡುವ ಭಾಗಗಳು) ಯನ್ನು ಹೊಂದಿಸಿ :

| *ಪಟ್ಟಿ I (ಬೆಳೆಗಳು)* | *ಪಟ್ಟಿ II (ಭಾಗ)* |
|---|---|
| A. ಶುಂಠಿ | I. ಟ್ಯೂಬರ್ (ಗೆಡೆ ಕಂದಡಿ) |
| B. ಆಲೂಗೆಡ್ಡೆ | II. ರೈಜೋಮ್ (ಬೇರುಕಾಂಡ) |
| C. ಬಾಳೆ | III. ಗೆಡ್ಡೆ (ಕಣ್ಣು, ಗಿಣ್ಣು) |
| D. ಈರುಳ್ಳಿ | IV. ಹೀರುಕ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | II | I | IV | III |
| (3) | II | III | IV | I |
| (4) | III | II | I | IV |

**95.** ತಿನ್ನುವ ಮತ್ತು ಆಹಾರೋತ್ಪನ್ನಗಳ ತಯಾರಿಕೆಗೆ ಬಳಕೆಯಾಗುವ ಅತಿ ಖ್ಯಾತ ಬಗೆ "ಥಾಮ್‌ಸನ್ ಸೀಡ್‌ಲೆಸ್" ಆಗಿದೆ, ಈ ಕೆಳಗಿನವುಗಳಲ್ಲಿ ಯಾವ ಬೆಳೆಯು ಈ ಸುಧಾರಿತ ಬಗೆಯನ್ನು ಪಡೆದಿದೆ ?

(1) ಸೇಬು

(2) ದ್ರಾಕ್ಷಿ

(3) ಪೀಚ್

(4) ಪಿಯರ್



Scanned by CamScanner

96. ಈ ಕೆಳಗಿನವುಗಳಲ್ಲಿ "ಮಿಶ್ರ ಬೆಳೆಗಾರಿಕೆಯ" ಪ್ರಧಾನ ಲಕ್ಷಣ ಯಾವುದು ?

(1) ನಗದು ಬೆಳೆಗಳು ಮತ್ತು ಆಹಾರ ಬೆಳೆಗಳೆರಡನ್ನೂ ಬೆಳೆಯುವುದು

(2) ಒಂದೇ ಕ್ಷೇತ್ರದಲ್ಲಿ 2 ಅಥವಾ ಹೆಚ್ಚು ಬೆಳೆಗಳನ್ನು ಬೆಳೆಯುವುದು

(3) ಬೆಳೆಗಳನ್ನು ಬೆಳೆಸುವುದು ಮತ್ತು ಹಾಗೆಯೇ ಜಾನುವಾರಗಳ ಹೆಚ್ಚಳವನ್ನು ಒಟ್ಟಿಗೇ ಮಾಡುವುದು

(4) ಈ ಮೇಲಿನ ಯಾವುವೂ ಅಲ್ಲ

97. A, B ಮತ್ತು C ಗಳು ಮೂರು ಅಂತರದ ಅಂಕಿಗಳು ಅವುಗಳನ್ನು ಕೂಡಿದರೆ ಬರುವ ಫಲಿತಾಂಶ ಕೆಳಗಿನಂತಿದೆ.

|   |   |   |   |
|---|---|---|---|
|   | A | B | C |
| + | A | B | C |
| + | A | B | C |
|   | C | C | C |

ಹಾಗಿದ್ದಲ್ಲಿ A, B ಮತ್ತು C ನ ಮೌಲ್ಯ ಏನು ?

(1) A = 3, B = 4, C = 5
(2) A = 2, B = 3, C = 1
(3) A = 5, B = 1, C = 3
(4) A = 1, B = 8, C = 5

98. ಸಂವಿಧಾನವು 1950 ರಲ್ಲಿ ಅಸ್ತಿತ್ವಕ್ಕೆ ಬಂದಾಗಿನಿಂದ ಭಾರತದಲ್ಲಿ ಎಷ್ಟು ಬಾರಿ ಆರ್ಥಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ ?

(1) 0
(2) 1
(3) 2
(4) 3

99. ಪಟ್ಟಿ I (ಬೆಳೆಗಳು) ಮತ್ತು ಪಟ್ಟಿ II (ರಾಜ್ಯಗಳು) ನ್ನು ಹೊಂದಿಸಿ :

| *ಪಟ್ಟಿ I (ಬೆಳೆ)* | *ಪಟ್ಟಿ II (ರಾಜ್ಯ)* |
|---|---|
| A. ಚಹಾ | I. ಉತ್ತರ ಪ್ರದೇಶ್ |
| B. ಕಬ್ಬು | II. ಅಸ್ಸಾಂ |
| C. ನೆಲಗಡಲೆ | III. ಹಿಮಾಚಲ ಪ್ರದೇಶ್ |
| D. ಸೇಬು | IV. ಗುಜರಾತ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

|   | A | B | C | D |
|---|---|---|---|---|
| (1) | II | III | I | IV |
| (2) | II | I | IV | III |
| (3) | I | II | III | IV |
| (4) | II | IV | III | I |

100. ಭಾರತದ ನಿರ್ದಿಷ್ಟ ಭಾಗಗಳಲ್ಲಿ ಪ್ರಯಾಣಿಸುವಾಗ ಕೆಂಪು ಮಣ್ಣನ್ನು ಗಮನಿಸಬಹುದು. ಈ ಬಣ್ಣಕ್ಕೆ ಪ್ರಮುಖ ಕಾರಣವೇನು ?

(1) ಮೆಗ್ನೀಸಿಯಮ್‌ನ ವಿಪುಲತೆ

(2) ಹ್ಯೂಮಸ್‌ನ ಸಂಗ್ರಹ

(3) ಫೆರಿಕ್ ಆಕ್ಸೈಡುಗಳ ಇರುವಿಕೆ

(4) ಫಾಸ್ಫೇಟ್‌ಗಳ ವಿಪುಲತೆ



Scanned by CamScanner